ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 15 ಏಪ್ರಿಲ್ 11, 1982 ಬೆಲೆ 60 ಪೈಸೆ

ಈ ಚಳುವಳಿ ಬೇಕೆ ?

ಈಗ ನಮ್ಮ ರಾಜ್ಯದ ಹಲವು ಕಡೆಗಳಲ್ಲಿ ಗೋಕಾಕ್ ಸಮಿತಿಯ ವರದಿಯನ್ನು ಕೂಡಲೇ ಜಾರಿ ಮಾಡಬೇಕೆಂಬ ಚಳುವಳಿ ನಡೆಯುತ್ತಿದೆ. ಕರ್ನಾಟಕ ರಾಜ್ಯ ರಚನೆಯಾಗಿ 25 ವರ್ಷಗಳ ನಂತರ ಕನ್ನಡ ರಾಜ್ಯದಲ್ಲಿ ಕನ್ನಡ ಭಾಷೆಗೆ ಆಧ್ಯತೆಯಿರಬೇಕೆಂಬ ಚಳುವಳಿ ನಡೆಯುತ್ತಿರುವುದು ನಿಜವಾಗಿ ಸೋಜಿಗವೆನಿಸುತ್ತದೆ. ಈ ಕಿರನಾದ ಚಳುವಳಿ ಇತರ ಯಾವ ರಾಜ್ಯದಲ್ಲೂ ನಡೆದಿಲ್ಲ.

ಬುದ್ಧಿಜೀವಿಗಳು, ಸಾಹಿತಿಗಳು, ಶಿಕ್ಷಕರು ಮುಂತಾದ ಮಧ್ಯಮ ವರ್ಗದವರೇ ಇದರಲ್ಲಿ ಹೆಚ್ಚು ಆಸಕ್ತಿ ವಹಿಸಿರುವರು. ಕರ್ನಾಟಕ ರಾಜ್ಯದಲ್ಲಿ ಕನ್ನಡ ಭಾಷೆಗೆ ಶಿಕ್ಷಣದಲ್ಲಿ ಪ್ರಾಧಾನ್ಯತೆ ಇರಬೇಕೆನ್ನುವುದು ಸಹಜ. ಮಹಾರಾಷ್ಟ್ರದಲ್ಲಿ ಮರಾಠಿ ಭಾಷೆಗೂ, ಗುಜರಾತ್‌ನಲ್ಲಿ ಗುಜರಾತಿ ಭಾಷೆಗೂ, ತಮಿಳು ನಾಡಿನಲ್ಲಿ ತಮಿಳಿಗೂ, ಪಶ್ಚಿಮ ಬಂಗಾಳದಲ್ಲಿ ಬಂಗಾಳಿ ಭಾಷೆಗೂ ಇರುವ ಸ್ಥಾನ ಕರ್ನಾಟಕದಲ್ಲಿ ಕನ್ನಡಕ್ಕೆ ದೊರೆಯಬೇಕೆನ್ನುವುದರಲ್ಲಿ ಯಾವ ವಿವಾದಕ್ಕೂ ಆಸ್ಪದವಿರಕೂಡದು. ಇದನ್ನೆಲ್ಲರೂ ಒಪ್ಪಲೇ ಬೇಕು.

ಆದರೆ ಅದೇ ಸಂದರ್ಭದಲ್ಲಿ ಗೋಕಾಕರ ವರದಿಯಿಂದ ಇತರ ಭಾಷೆಯನ್ನಾಡುವವರಿಗೆ ಹಾನಿಯಾಗಬಹುದೆಂದು ಕೆಲವರು ಸಂಶಯ ವ್ಯಕ್ತಪಡಿಸಿದರೆ ಅದರ ಬಗ್ಗೆ ವಿಚಾರ ಮಾಡಬೇಕಾದುದೂ ಅಗತ್ಯ. ನ್ಯಾಯಾಧೀಶರಾಗಿದ್ದ ಶ್ರೀ ತುಕೋಳರವರು ಸಂವಿಧಾನದ ರೂಲ್ 3 ರಂತೆ ಅಲ್ಪ ಭಾಷೆಯನ್ನಾಡುವವರಿಗೆ ಈ ವರದಿಯಿಂದ ಹಾನಿಯಾಗುತ್ತದೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇತರರೂ ವಿರೋಧಿಸಿದ್ದಾರೆ. ಇದರಿಂದ ನ್ಯಾಯಾಧೀಶರಾಗಿದ್ದ ತುಕೋಳರವರಿಗೆ ಕನ್ನಡಾಭಿಮಾನ ಇತರರಿಗಿಂತ ಕಮ್ಮಿಯಿದೆಂಬುದಾಗಿ ಯಾರೂ ಹೇಳಲು ಸಾಧ್ಯವಿಲ್ಲ. ಕನ್ನಡೇತರರಲ್ಲಿ ಈ ವರದಿಯ ಬಗ್ಗೆ ಸಂಶಯವೇನೆಂದು ತಿಳಿದು ಅದನ್ನು ಬಗೆಹರಿಸುವುದು ನಮ್ಮ ಕರ್ತವ್ಯ.

ಇತರ ಭಾಷೆಗಳನ್ನಾಡುವವರು ಎಲ್ಲ ಪ್ರಾಂತಗಳಲ್ಲೂ ಇದ್ದಾರೆ. ಅವರದೇ ವಿದ್ಯಾ ಸಂಸ್ಥೆಗಳೂ ಇವೆ. ಸಂವಿಧಾನದ ಹಕ್ಕುಗಳಿಗೆ ಚ್ಯುತಿ

ಸಂಪಾದಕೀಯ

ಬಾರದಂತೆ ಆಯಾ ರಾಜ್ಯ ಸರ್ಕಾರಗಳು ತಮ್ಮ ನೀತಿಯನ್ನನುಸರಿಸುತ್ತಿವೆ. ಕರ್ನಾಟಕ ಸರ್ಕಾರವೂ ಆ ಹಾದಿಯಲ್ಲಿ ಮುಂದುವರಿಯಲಿ.

ಭಾಷೆಯ ಪ್ರಶ್ನೆಯನ್ನು ತಂದು ದುಡಿಯುವ ಜನತೆಯಲ್ಲಿ ಒಡಕುಂಟು ಮಾಡುವುದು ತಪ್ಪು. ಈ ರಾಜ್ಯದಲ್ಲಿ ಹುಟ್ಟಿದವರೆಲ್ಲರೂ ಕನ್ನಡಿಗರೇ. ತಾವು ಕನ್ನಡಿಗರೆಂಬ ಅಭಿಮಾನ ಎಲ್ಲರಿಗೂ ಇದೆ. ಇಲ್ಲಿ ತಮಿಳು, ಉರ್ದು, ತೆಲುಗು ಭಾಷೆಗಳನ್ನಾಡುವವರು ಬಂದು ನಲೆಸಿದ್ದಾರೆಂಬ ಕಾರಣಕ್ಕೆ ಯಾರೂ ಹೆದರಬೇಕಾಗಿಲ್ಲ. ಅವರೂ ಈ ರಾಜ್ಯ ತಮ್ಮದೆಂದು ತಿಳಿದಿದ್ದಾರೆ. ಕನ್ನಡಕ್ಕೆ ದೊರೆಯಬೇಕಾದ ಸ್ಥಾನವನ್ನು ಯಾರೂ ಕಸಿದುಕೊಳ್ಳಲಾರರು. ಅವರಲ್ಲಿ ಅನೇಕರು ಕನ್ನಡ ಸಾಹಿತ್ಯದಲ್ಲಿ ಹೆಸರುವಾಸಿಯಾಗಿದ್ದಾರೆ.

ಕನ್ನಡ ರಾಜ್ಯದ, ಕನ್ನಡ ಭಾಷೆಯ ಹಿಂದುಳಿದಿರುವಿಕೆಗೆ ಕನ್ನಡಿಗರೇ ಕಾರಣ. ನಮ್ಮ ಜನರಲ್ಲಿ ಓದುವ ಹವ್ಯಾಸ ಬೆಳೆಯಬೇಕು. ಭಾಷೆಯ ಕುರಿತು ಹೆಮ್ಮೆ ಇರಬೇಕು. ಇದಕ್ಕೆ ಪ್ರಭಾವಾತ್ಮಕ ಚಳುವಳಿ, ಜನತೆಯ ಸಾಮೂಹಿಕ ಸಂಘಟನೆಗಳು ಬೆಳೆಯುವುದಗತ್ಯ. ಉದ್ರಿಕ್ತಕಾರಿ ಭಾಷಣಗಳಿಂದ ಸಮಸ್ಯೆ ಬಗೆಹರಿಯಲು ಸಾಧ್ಯವಿಲ್ಲ. ಜನತೆಯಲ್ಲಿ ಈ ಪ್ರಜ್ಞೆ ಬೆಳೆಯಬೇಕು. ಸಂಕುಚಿತ ಭಾವನೆಗಳನ್ನು ತೊರೆದು ಕನ್ನಡೇತರ ಭಾಷೆಗಳನ್ನಾಡುವವರ ಸಹಕಾರ ಪಡೆದು ಮುಂದುವರಿಯೋಣ.

(8ನೇ ಪುಟ ನೋಡಿ)

ಮುಳಬಾಗಿಲು ಸಮ್ಮೇಳನದ ಕರೆಯಂತೆ ನಡೆದ

ಯಶಸ್ವೀ ಪ್ರತಿಭಟನಾ ದಿನಾಚರಣೆ

ಕಾಂಗ್ರೆಸ್ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಯ ವಿರುದ್ಧ ಏಪ್ರಿಲ್ 5 ರಂದು ರಾಜ್ಯದಾದ್ಯಂತ ಪ್ರತಿಭಟನಾ ದಿನಾಚರಣೆ ನಡೆಸಲು ಮುಳುಬಾಗಿಲಿನಲ್ಲಿ ಸೇರಿದ್ದ ಪ್ರಾಂತ ರೈತ ಸಂಘದ 7ನೇ ಸಮ್ಮೇಳನ ಕರೆಕೊಟ್ಟಿತ್ತು. (ವಿವರಕ್ಕಾಗಿ ಮಾ 21 ಐಕ್ಯರಂಗ ನೋಡಿ),

ಸರಕಾರದ ರೈತ ವಿರೋಧಿ, ಜನ ವಿರೋಧಿ ಕ್ರಮಗಳನ್ನು ಬಿಟ್ಟುಕೊಡಬೇಕೆಂದು ಒತ್ತಾಯಿಸಲು ಏಪ್ರಿಲ್ 5ರಂದು ಎಲ್ಲ ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ದಿನಾಚರಣೆಯ ಅಂಗವಾಗಿ ಮೆರವಣಿಗೆ, ಮತ ಪ್ರದರ್ಶನ, ಬಹಿರಂಗ ಸಭೆಗಳು ನಡೆದಿರುವ ವರದಿಯಾಗಿದೆ. ಲಭ್ಯವಿರುವ ವರದಿ ಇಂತಿದೆ :

ಬೆಂಗಳೂರು:

ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳ ರೈತರು ಬೆಂಗಳೂರು ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಮೆರವಣಿಗೆ ಹೊರಟು ತಹಶೀಲ್ದಾರ ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಇದರ ನೇತೃತ್ವವನ್ನು ಕಾಂ| ಶಾಮಣ್ಣರೆಡ್ಡಿ, ವೆಂಕಟಾಚಲಯ್ಯ ಇವರುಗಳು ವಹಿಸಿದ್ದರು. ನಂತರದ ಜಿಲ್ಲಾಧಿಕಾರಿ ಕಛೇರಿ ಆವರಣದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಬೆಂಗಳೂರು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ| ಲಕ್ಕಣ್ಣ ಮಾತನಾಡಿದರು.

ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕು ಕೇಂದ್ರದಲ್ಲಿ ಸುತ್ತ ಮುತ್ತಲಿನ ಹಳ್ಳಿಗಳ ರೈತರು ಸಮಾವೇಶಗೊಂಡು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಕಾರ್ಯಕ್ರಮದ ನೇತೃತ್ವವನ್ನು ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಕಾಂ| ಮನೋಹರ್, ಗೋಪಾಲ್ ವಹಿಸಿದ್ದರು. ತಹಶೀಲ್ದಾರರಿಗೆ ಮನವಿ ಸಲ್ಲಿಸಿದ ನಂತರ ನಡೆದ ಸಭೆಯಲ್ಲಿ ಕಾರ್ಮಿಕ ಮುಖಂಡ ಕಾಂ| ಪಿ. ಕೆ. ಸುಬ್ರಮಣಿ, ಮನೋಹರ ಮತ್ತಿತರರು ಮಾತನಾಡಿದರು.

ಕನಕಪುರ ತಾಲ್ಲೂಕಿನ ರೈತರು ತಾಲ್ಲೂಕು ಕಛೇರಿ ಎದುರು ಧರಣಿ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು. ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕಾಂ| ಪಿ. ಜಗನ್ನಾಥ ಅವರು ನಾಯಕತ್ವ ವಹಿಸಿದ್ದರು.

ನೆಲಮಂಗಲ ತಾಲ್ಲೂಕಿನ ರೈತರು ಮೆರವಣಿಗೆ ಹೊರಡಿಸಿ ತಹಶೀಲ್ದಾರ್, ವಿದ್ಯುತ್ ಮಂಡಳಿಯ ಸಹಾಯಕ ಇಂಜಿನೀಯರ್ ಮತ್ತು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಮೆರವಣಿಗೆಯ ನೇತೃತ್ವವನ್ನು ಜಿಲ್ಲಾ ರೈತ ಸಂಘದ ಕಾಂ| ಸಿ. ರಾಮಭದ್ರಯ್ಯ, ಸಹ ಕಾರ್ಯದರ್ಶಿ ವಸಂತಯ್ಯ, ತಾಲ್ಲೂಕು ಮುಖಂಡರಾದ ಕಾಂ| ಆರ್. ಶ್ರೀನಿವಾಸ್ ಮತ್ತು ಕಾಂ| ಮಹಮ್ಮದ್ ದಸ್ತಗೀರ್ ವಹಿಸಿದ್ದರು. ನಂತರ ಬಹಿರಂಗ ಸಭೆ ನಡೆಯಿತು.

ಮಾಗಡಿ ತಾಲ್ಲೂಕಿನಲ್ಲಿ ಕಾಂ| ಜಿ. ಸಿ. ಗಂಗಯ್ಯ, ನಂಜುಂಡಯ್ಯನವರ ನೇತೃತ್ವದಲ್ಲಿ ರೈತರು ತಾಲ್ಲೂಕು ಕಛೇರಿಬಳಿ ಸೇರಿ ತಹಶೀಲ್ದಾರರಿಗೆ ರೈತರ ಬೇಡಿಕೆಗಳ ಮನವಿ ಸಲ್ಲಿಸಿದರು.

ದೊಡ್ಡಬಳ್ಳಾಪುರದಲ್ಲಿ ಸುಮಾರು 400 ರೈತರು ಪುರಭವನದಿಂದ ಮೆರವಣಿಗೆಯಲ್ಲಿ ಹೋಟು ಕೆ. ಇ. ಬಿ ಅಧಿಕಾರಿಗಳಿಗೆ, ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು. ಮೆರವಣಿಗೆಗೆ ಮೊದಲು ಕೋಡಿಹಳ್ಳಿ ರೈತ ಸಮುದಾಯದವರು 'ಬಂದರೋ ಬಂದರು' ಎಂಬ ಬೀದಿ ನಾಟಕ ಪ್ರದರ್ಶಿಸಿದರು. ನಂತರ ನಡೆದ ಸಭೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಕಾಂ| ಎಚ್. ಮುಗುವಾಳಪ್ಪ, ಟಿ. ಎನ್. ಬಾಲಾಜಿ ಮತ್ತಿತರರು ಮಾತನಾಡಿದರು.

ದ. ಕ. ಜಿಲ್ಲೆ :

ದ. ಕ. ಜಿಲ್ಲೆಯ ಉಡುಪಿಯಲ್ಲಿ ಏಪ್ರಿಲ್ 5ರಂದು ರೈತರ ಪ್ರತಿಭಟನಾ ದಿನಾಚರಣೆ ನಡೆಯಿತು. ಬೆಳಿಗ್ಗೆ 11 ಘಂಟೆಯಿಂದ ಸಾಯಂಕಾಲದ ವರೆಗೆ

(8ನೇ ಪುಟವನ್ನು ನೋಡಿ)

"ಸುಭದ್ರ–ಶಕ್ತಿಶಾಲಿ ಕಾಂಗ್ರೆಸ್"ನ ಅಂತರಂಗ–ಬಹಿರಂಗ

ಮಾರ್ಚಿ 29 ರಂದು ರಾಜ್ಯಸಭಾ ಚುನಾವಣೆಗಳ ಫಲಿತಾಂಶ ಘೋಷಿಸಲ್ಪಟ್ಟ ದಿನದಂದು ಕಾಂಗ್ರೆಸಿನವರಿಗೆ ತಮ್ಮ ಪಕ್ಷದ ಐಕ್ಯ ಶಕ್ತಿ ಮತ್ತು ಸುಭದ್ರತೆಗಳ ಬಗ್ಗೆ ಭ್ರಮ ನಿರಸನಗೊಳ್ಳುವಂತಾಗಿದೆ. ಚುನಾವಣೆಗಳಲ್ಲಿ ಹಿಂದೆಂದೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಾಂಗ್ರೆಸ್ ಸದಸ್ಯರು ವಿರೋಧಿ ಅಭ್ಯರ್ಥಿಗಳಿಗೆ ಓಟು ನೀಡಿದ್ದು ಕಂಡುಬಂದಿರಲಿಲ್ಲ.

ಮೇಲ್ಮನೆಗೆ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಬಲವನ್ನು ಉಳಿಸಿಕೊಂಡಿದೆಯಲ್ಲದೇ ಸ್ವಲ್ಪ ಶಕ್ತಿಯನ್ನು ಸಹ ವರ್ಧಿಸಿಕೊಂಡಿದೆ. ಈ ಅಂಶವು ಹೇಗಾದರೂ ಮಾಡಿ ಕಾಂಗ್ರೆಸ್ ಶಾಸಕರು ವಿರೋಧ ಪಕ್ಷಗಳ ಅಭ್ಯರ್ಥಿಗಳಿಗೆ ಓಟು ನೀಡಿರುವುದನ್ನು ಮತ್ತು ತಮ್ಮ ಪಕ್ಷದ ಆದೇಶಗಳನ್ನು ಮೀರಿ ವರ್ತಿಸಿರುವುದನ್ನು ಮರೆಮಾಡುತ್ತದೆ.

ಇಂಥ ಆದೇಶ, ಶಿಸ್ತು ಮುರಿದು ನಡೆದುಕೊಂಡ ರಾಜ್ಯಗಳ ಪೈಕಿ ಆಂಧ್ರ ಪ್ರದೇಶವು ಎಲ್ಲಕ್ಕೂ ಮೊದಲನೆಯದಾಗಿರುತ್ತದೆ. ವಿರೋಧ ಪಕ್ಷಗಳ ಸಂಯುಕ್ತ ಶಕ್ತಿಯು ಕೇವಲ 40 ಮತಗಳಷ್ಟಿದ್ದರೂ ವಿರೋಧಿ ಪಕ್ಷಗಳ ಸಂಯುಕ್ತ ಅಭ್ಯರ್ಥಿ ಬಾಬುಲ್ ರೆಡ್ಡಿಯವರು 56 ಮತಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ಇನ್ನಷ್ಟು ಮುಂದೆ ಹೋಗಿ ನೋಡಿದರೆ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದವನೊಬ್ಬನನ್ನು ನಂತರ ಕಾಂಗ್ರೆಸ್ 'ದತ್ತು' ತೆಗೆದುಕೊಂಡು ಅವನು 32 ಮತಗಳನ್ನು ಪಡೆಯುವಂತೆ ಯೋಜಿಸಲಾಗಿದ್ದರೂ ಅವನಿಗೆ 56 ಮತಗಳು ಚಲಾಯಿಸಲ್ಪಟ್ಟವು. ಹೀಗೆ ಒಟ್ಟು ಕಾಂಗ್ರೆಸಿನ 30 ಮತಗಳು ಪಕ್ಷದ ಆದೇಶ ಮೀರಿ ಚಲಾಯಿಸಲ್ಪಟ್ಟ ಮತಗಳಾಗಿವೆ. ಹೀಗಾಗಿ ಸ್ವತಃ ಪ್ರಧಾನ ಮಂತ್ರಿ ಆಯ್ಕೆಯಿಂದಲೇ ಹುರಿಯಾಳಾಗಿ ಆಯ್ಕೆಗೊಂಡಿದ್ದ ಕಾಂಗ್ರೆಸ್ ಅಭ್ಯರ್ಥಿಯೊಬ್ಬ ಪರಾಭವಗೊಂಡು ಕಾಂಗ್ರೆಸ್ 'ದತ್ತು' ಪಡೆದುಕೊಂಡಿದ್ದ ಸ್ವತಂತ್ರನೊಬ್ಬನು ವಿಜಯಿಯಾಗುವಂತಾಗಿದೆ.

ಕಾಂಗ್ರೆಸ್ ರಾಜ್ಯ ಸಭಾ ಚುನಾವಣಾ ಫಲಿತಾಂಶಗಳು ಏಕಾಏಕಿಯಾಗಿ ಪ್ರತ್ಯೇಕವಾಗಿ ಬಂದಂತವುಗಳಲ್ಲ; ವಿಧಾನ ಸಭೆಯಾಚಗಿನ ಕೆಲವು ವಿಶಿಷ್ಟ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಬಂದಂಥವುಗಳು. ಆರಕ್ಕೂ ಕಡಿಮೆ ಅಲ್ಲದಷ್ಟು ಕಾಂಗ್ರೆಸ್ ಎಂ. ಎಲ್. ಎ. ಗಳು ಪಕ್ಷವನ್ನು ತೊರೆದು ಸಿನಿಮಾ ನಟ ಎನ್. ಟಿ. ಆರ್. ಹೊಸದಾಗಿ ರಚಿಸಿರುವ 'ತೆಲುಗು ದೇಶಂ' ಪಕ್ಷವನ್ನು ಸೇರಿರುತ್ತಾರೆ. ಇದೂವರೆಗೂ ತನ್ನ ರಾಜೀನಾಮೆಯನ್ನು ಪ್ರಕಟಿಸದ ಮಾಜೀ ಮುಖ್ಯ ಮಂತ್ರಿ ಅಂಜಯ್ಯ 'ಪಂಚಾಯಿತಿ ರಾಜ್ಯ ಫೋರಂ' ನ್ನು

(೫ನೆಯ ಪುಟವನ್ನು ನೋಡಿ)

ಧಾರವಾಡ

ತೀವ್ರಗೊಂಡಿರುವ ಕೃಷಿ ಕಾರ್ಮಿಕರ ಹೋರಾಟ

(ಕರ್ನಾಟಕದಲ್ಲಿ ಕೃಷಿ ಕಾರ್ಮಿಕರ ಸಂಘಟನೆ ತೀರ ವಿರಳ ಮತ್ತು ದುರ್ಬಲ. ಅಲ್ಲಷ್ಟು-ಇಲ್ಲಷ್ಟು ಪ್ರಯತ್ನ ನಡೆಯುತ್ತಿದೆ. ಧಾರವಾಡದ ಕೃಷಿ ಕಾಲೇಜ್ ಫಾರ್ಮ್‌ನ ಕೃಷಿ ಕಾರ್ಮಿಕರು 3-4 ವರ್ಷಗಳಿಂದ ಸಂಘನೆ ಕಟ್ಟಿಕೊಂಡು ನ್ಯಾಯಬದ್ಧ ಸೌಲಭ್ಯಗಳಿಗೋಸ್ಕರ ಹೋರಾಡುತ್ತಿದ್ದಾರೆ.

ಕೃಷಿ ಕಾರ್ಮಿಕರ ಸಂಘಟನೆ ಎಲ್ಲರೂ ಆಗಬೇಕೆನ್ನುವರೇ. ಇದಕ್ಕೆ ರಾಷ್ಟ್ರಾಧ್ಯಕ್ಷರು ಸಹಿತ ಹೊರತಾಗಿಲ್ಲ. ಕೃಷಿ ಕಾರ್ಮಿಕರ ಕುರಿತು ಪ್ರತ್ಯೇಕ ಮಂತ್ರಿ ಮಂಡಳ ರಚಿಸಿ, ಕೇಂದ್ರ ಕಾನೂನು ಬೇಕೆಂದು ಆಳುವ ವರ್ಗದ ಮುಖಂಡರು ಹೇಳುತ್ತ ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದಾರೆ.

ಆದರೆ, ಎಲ್ಲೆಲ್ಲಿ ಕೃಷಿ ಕಾರ್ಮಿಕರ ಹೋರಾಟ ನಡೆಯುತ್ತಿದೆಯೋ ಅಲ್ಲೆಲ್ಲ ಆ ಹೋರಾಟಗಳನ್ನು ಈ ಆಳುವ ವರ್ಗದ ಪಕ್ಷವೇ ತೀವ್ರ ದಬ್ಬಾಳಿಕೆಯಿಂದ ಹೊಸಗಿಹಾಕಲು ಯತ್ನಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಪಂಥನಗರ, ಬೆಲ್ಚಿ ಮುಂತಾದ ಕಡೆಗಳಲ್ಲಿ ಕೃಷಿಕಾರ್ಮಿಕರ ಮೇಲೆ ನಡೆದ ದೌರ್ಜನ್ಯ, ದಬ್ಬಾಳಿಕೆಗಳನ್ನು ಜ್ಞಾಪಿಸಿಕೊಳ್ಳಬಹುದು.)

ಧಾರವಾಡದ ಕೃಷಿ ಕಾಲೇಜಿನ ಕೃಷಿ ಕಾರ್ಮಿಕರು ಸಂಘಟನೆಗೊಂಡ ನಂತರ ಕೂಲಿಯಲ್ಲಿ ಹೆಚ್ಚಳ, ಉದ್ಯೋಗದ ರಕ್ಷಣೆ ಮುಂತಾದ ಬೇಡಿಕೆಗಳನ್ನು ಮುಂದಿಟ್ಟು ವಿಶ್ವವಿದ್ಯಾಲಯ ಅಧಿಕಾರಿಗಳಿಗೆ ಅನೇಕ ಸಲ ಮನವಿ ಮಾಡಿಕೊಂಡಿದ್ದರು. ಎರಡು ಸಲ ಸುಧೀರ್ಘ ಹೋರಾಟವನ್ನು ಮಾಡಿದ್ದರು. ಈ ಹೋರಾಟಗಳ ಫಲವಾಗಿ ಒಮ್ಮೆ 40 ಪೈಸೆ, ಇನ್ನೊಮ್ಮೆ 50ಪೈಸೆ ದಿನಗೂಲಿಯಲ್ಲಿ ಹೆಚ್ಚಳವಾಗಿತ್ತು. ಉಳಿದ ಬೇಡಿಕೆಗಳನ್ನು ಈಡೇರಿಸಿದ್ದಿಲ್ಲ. ಅತ್ಯಂತ ಆಕ್ಷೇಪಣೀಯ ಏನೆಂದರೆ ಕೃಷಿ ಕಾರ್ಮಿಕರ ಸಂಘವನ್ನು ಮನ್ನಿಸದಿರುವುದು.

ಈಗ ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳ ದಬ್ಬಾಳಿಕೆ-ಅನ್ಯಾಯ ಪ್ರತಿಭಟಿಸಿದಕ್ಕಾಗಿ ಸುಮಾರು 50 ದಿನಗಳಿಂದ ಸುಮಾರು 450 ಕೃಷಿ ಕಾರ್ಮಿಕರಿಗೆ ಕೆಲಸ ನಿರಾಕರಿಸಲಾಗಿದೆ. ಪ್ರವೇಶವನ್ನು ನಿಷೇಧಿಸುವ ಪ್ರಕಟನೆ ಹೊರಡಿಸಲಾಗಿದೆ. ಒಂದು ರೀತಿಯ ಅಕ್ರಮ ಲಾಕೌಟನ್ನು ಸಾರಿ, ಮೊದಲೇ ಕಡು ಬಡತನದಿಂದ ಪರಿತಪಿಸುತ್ತಿರುವ ಕೃಷಿ ಕಾರ್ಮಿಕರನ್ನು ನಿರ್ಗತಿಕರನ್ನಾಗಿಸುವ ಅಮಾನುಷ ಕೃತ್ಯಕ್ಕಿಳಿದಿದ್ದಾರೆ. ಈ ಘಟನೆಯ ವಿವರ ಇಂತಿದೆ :

ಫೆಬ್ರವರಿ 13ರಂದು ಏಕಾಏಕಿಯಾಗಿ ಸುಮಾರು 40 ಜನ ಕೃಷಿಕಾರ್ಮಿಕರನ್ನು ಕೆಲಸದಿಂದ ವಜಾಮಾಡಲಾಯಿತು. ಅಧಿಕಾರಿಗಳು, ಸುಗ್ಗಿ (Harvest) ಯ ಕೆಲವು ಕೆಲಸ ಕಾರ್ಯಗಳನ್ನು ಬೇರೆಯವರಿಗೆ ಗುತ್ತಿಗೆ (contract) ವಹಿಸಿಕೊಡುವ ಹಠ ಹಿಡಿದರು. ಗುತ್ತಿಗೆ ಪದ್ಧತಿಯನ್ನು ವಿರೋಧಿಸಿ ಪ್ರತಿಭಟಿಸಿದ್ದಕ್ಕಾಗಿ ಸಂಘದ ಪ್ರಧಾನ ಕಾರ್ಯದರ್ಶಿ ಬಿ. ಎಫ್. ಸವದತ್ತಿ ಎಂಬುವರನ್ನು ವಜಾ ಮಾಡಲಾಗಿದೆ.

ಈ ಎಲ್ಲ ವಿವರಣೆಗಳನ್ನು ಫೆ. 17 ರಂದು ಕಾಲೇಜಿಗೆ ಭೇಟಿ ಇತ್ತಿದ್ದ ಉಪಕುಲಪತಿಗಳಿಗೆ ಶಾಂತರೀತಿಯಿಂದ ಭಿನ್ನವಿಸಿಕೊಳ್ಳಲಾಯಿತು. ಉಪಕುಲಪತಿ ಸಹೃದಯದಿಂದ ಪರಿಶೀಲಿಸಿ ಪರಿಹರಿಸುವುದನ್ನು ಬಿಟ್ಟು ಸಂಪೂರ್ಣ ವಿವೇಕ ಶೂನ್ಯರಾಗಿ ವರ್ತಿಸಿದ್ದು ಅತ್ಯಂತ ವಿಷಾದನೀಯ.

ಮರುದಿನ ವಿ. ಸಿ. ಯವರಿಗೆ ಘೇರಾವೊ ಮಾಡಿದ್ದಾರೆಂದು ಸುಳ್ಳು ಆರೋಪ ಹೊರಿಸಿ, ಸಂಘದ ಅಧ್ಯಕ್ಷ ಕಾಂ! ವಿ. ಎಸ್. ಹಳಕಟ್ಟಿಯವರನ್ನು ಒಳಗೊಂಡು 28 ಜನರನ್ನು ಪೋಲೀಸರು ಬಂಧಿಸಿದರು. ಇವರುಗಳು 23-3-82ರಂದು ಹೊರಗೆ ಬರುವಷ್ಟರಲ್ಲಿ ಕಾರ್ಮಿಕರಿಗೆ ಕಾಲೇಜ್ ಆವರಣದಲ್ಲಿ ಪ್ರವೇಶ ನಿಷೇಧಿಸಿ ಆಜ್ಞೆಮಾಡಲಾಗಿತ್ತು. ಕಾಲೇಜ್ ಆವರಣದಲ್ಲೆ ಮನೆಗಳನ್ನು ಹೊಂದಿದ್ದ 16 ಜನರನ್ನು ಆಜ್ಞೆ ಉಲ್ಲಂಘನೆ (Tress Pass) ಮಾಡಿದ್ದಾರೆಂಬ ನೆವದಿಂದ ಬಂಧಿಸಲಾಯಿತು.

ಅಧಿಕಾರಿಗಳ ಕುತಂತ್ರ

ಸಂಘಟನೆಯನ್ನು ಹೇಗಾದರೂ ಮಾಡಿ ಮುರಿಯಲು ಸಜ್ಜಾಗಿದ್ದ ವಿಶ್ವವಿದ್ಯಾಲಯದ ಅಧಿಕಾರಿಗಳು ಕಬ್ಬಿನ ತೋಟಕ್ಕೆ ಬೆಂಕಿ ಹಚ್ಚಿಸಿ, ಈ ಅಪವಾದ ಕೃಷಿಕಾರ್ಮಿಕರಮೇಲೆ ಬರುವಂತೆ ಮಾಡಿ ಹೋರಾಟಕ್ಕೆ ಕಪ್ಪು ಮಸಿ ಬಳಿಯುವ ಮತ್ತು ಸಾರ್ವಜನಿಕರಿಂದ ಸೌಹಾರ್ದ ಬೆಂಬಲ ಸಿಗದಿರುವಂತೆ ಪ್ರಯತ್ನಿಸಲಾಯಿತು. ಅಲ್ಲದೇ ಕಾಲೇಜ್ ಕ್ಯಾಂಪಸ್‌ನೊಳಗಿದ್ದ ಸಂಘದ ಕಛೇರಿಯ ಬೀಗಮುದ್ರೆ ಮುರಿದು ಕಾಗದ ಪತ್ರವನ್ನು ನಾಶಪಡಿಸಿದ್ದೇ ಅಲ್ಲದೇ ಸಂಘದ ಬೋರ್ಡನ್ನು ಕಿತ್ತೆಸೆಯಲಾಯಿತು. ಈ ಕುರಿತು ಪೋಲೀಸ್ ಕಂಪ್ಲೆಂಟ್ ಕೊಟ್ಟರೂ ಪ್ರಯೋಜನವಾಗಿಲ್ಲ.

ಕೃಷಿಕಾರ್ಮಿಕರನ್ನು ಬೆಂಬಲಿಸಿ ಎಲ್ಲ ಕಾರ್ಮಿಕ ಸಂಘಟನೆಗಳು ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಸ್ಥಳದ ಮೇಲೆ ಪೋಲೀಸರು ಹಲ್ಲೆ ಮಾಡಿ ಸತ್ಯಾಗ್ರಹ ಮಂಟಪ ಕಿತ್ತೆಸೆದಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆ ಕಾಯ್ದುಕೊಳ್ಳಬೇಕಾಗಿದ್ದವರೇ ಹೀಗೆ ಪಕ್ಷಪಾತ ಧೋರಣೆ ಅನುಸರಿಸುತ್ತಿದ್ದಾರೆ!

ತಿಂಗಳುಗಳ ಮೇಲಾದರೂ ವಿಶ್ವವಿದ್ಯಾಲಯದ ಅಧಿಕಾರಿಗಳು ಮಾತುಕತೆಗೆ ಬರದೇ ಇರುವುದು, ಕೃಷಿಕಾರ್ಮಿಕರ ಮೇಲೆ ದಬ್ಬಾಳಿಕೆ ಮುಂದುವರಿಸಿರುವುದು ಖಂಡನಾರ್ಹ. ಬೇಡಿಕೆಗಳನ್ನು ಬಗೆಹರಿಸದೇ, ಕನಿಷ್ಠ ಕೂಲಿ ಜಾರಿ ಮಾಡದೇ ಸಂಘಟನೆಯನ್ನು ಮುರಿಯಲು ಬೇರೆ ಜಿಲ್ಲೆಯಿಂದ ಅಸಂಘಟಿತ, ಮುಗ್ಧ ರೈತ ಕೂಲಿಕಾರರನ್ನು ಕರೆತಂದು ಕೆಲಸ ಮಾಡಿಸಲಾಗುತ್ತಿದೆ.

ಕೃಷಿ ಕಾರ್ಮಿಕರ ಬಗ್ಗೆ, ಹರಿಜನ-ಗಿರಿಜನರ ಬಗ್ಗೆ ಬಾಯಿತುಂಬ ಮಾತನಾಡುವರೆಲ್ಲರೂ ಈಗ ಕಣ್ಮುಚ್ಚಿ ಕುಳಿತಿದ್ದಾರೆ.

ನ್ಯಾಯಬದ್ಧ ಬೇಡಿಕೆಗಳಿಗೋಸ್ಕರ ತೀವ್ರ ದಬ್ಬಾಳಿಕೆ ಎದುರಿಸಿ ಹೋರಾಡುತ್ತಿರುವ ಕೃಷಿ ಕಾರ್ಮಿಕರ ಹೋರಾಟಕ್ಕೆ ಎಲ್ಲ ಕಾರ್ಮಿಕ ಸಂಘಟನೆಗಳು, ಪ್ರಜಾಪ್ರಭುತ್ವ ಪ್ರೇಮಿಗಳೂ ಬೆಂಬಲಿಸಬೇಕೆಂದು ಕೃಷಿ ಕಾರ್ಮಿಕ ಸಂಘದ ಅಧ್ಯಕ್ಷ ಹಾಗೂ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ! ವಿ. ಎಸ್. ಹಳಕಟ್ಟಿ ಮನವಿ ಮಾಡಿದ್ದಾರೆ.

ಬೀಡಿ ಲೇಬರ್ ಯೂನಿಯನ್ನಿನ ವಾರ್ಷಿಕ ಮಹಾಸಭೆ

ಗುರುಪುರ ಸುರತ್ಕಲ್ಲಿನ ಪ್ರದೇಶ ಬೀಡಿ ಲೇಬರ್ ಯೂನಿಯನ್ನಿನ ವಾರ್ಷಿಕ ಮಹಾಸಭೆಯು 28-3-82 ರಂದು ಮಶಲ ರೈತಸಂಘದ ಬಳಿಯಲ್ಲಿ ನಡೆಯಿತು. ಈಶ್ವರ ಅವರು ಅಧ್ಯಕ್ಷತೆ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕಾಂ|| ಯು. ಬಿ. ಲೋಕಯ್ಯ, ಎಂ. ಎಸ್. ನಾರಾಯಣ, ಮತ್ತು ಕೆ. ಗಂಗಯ್ಯ ಮಾತನಾಡಿದರು.

ಸಂಘದ ಕಾರ್ಯದರ್ಶಿ ಯಂ. ಹೊನ್ನಯ್ಯ ಅವರು 1981ರ ಲೆಕ್ಕಪತ್ರವನ್ನು ಮಂಡಿಸಿದರು. ನಂತರ ನೂತನ ಸಾಲಿಗೆ ಹತ್ತೊಂಬತ್ತು ಜನರ ಸಮಿತಿಯನ್ನು ರಚಿಸಲಾಯಿತು.

ಕೊನೆಯಲ್ಲಿ ಕೆ. ಗಂಗಯ್ಯ ವಂದಿಸಿದರು.

ಏಪ್ರಿಲ್ 24 ಮತ್ತು 25ರಂದು ಬಂಟ್ವಾಳದಲ್ಲಿ ರಾಜ್ಯ ಬೀಡಿ ಮಜೂರರ 3ನೇ ರಾಜ್ಯ ಸಮ್ಮೇಳನ

ಸರಕಾರವು ಬೀಡಿ ಮಜೂರರ ಕನಿಷ್ಠ ವೇತನ ಪರಿಷ್ಕರಣ ಮಾಡುವಾಗ ಕನಿಷ್ಠ ವೇತನದ ಸಲಹಾ ಸಮಿತಿಯ ಬಹುಮತ ನಿರ್ಣಯವನ್ನು ಧಿಕ್ಕರಿಸಿ, ರಾಜ್ಯದ ಬೀಡಿ ಮಜೂರರಿಗೆ ಅನ್ಯಾಯಮಾಡಿದೆ. ಪ್ರಾವಿಡೆಂಟ್ ಫಂಡಿನ ವ್ಯವಸ್ಥೆ ಇನ್ನೂ ಸರಿಯಾಗಿಲ್ಲ. ಈ ಸಮಸ್ಯೆಗಳನ್ನೆಲ್ಲಾ ಚರ್ಚಿಸಿ ರಾಜ್ಯದ್ಯಂತ ಬೀಡಿ ಮಜೂರರ ಪ್ರಬಲ ಸಂಘಟನೆಯನ್ನು ಕಟ್ಟಲು ಅನುಕೂಲವಾಗುವಂತೆ ಏಪ್ರಿಲ್ ತಿಂಗಳ ತಾ|24-4-82 ರಂದು ಮತ್ತು 25-4-82 ರಂದು ರಾಜ್ಯದ ಬೀಡಿ ಮಜೂರರ 3ನೇ ಸಮ್ಮೇಳನವನ್ನು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ಕರೆಯಲು ನಿರ್ಣಯಿಸಲಾಗಿದೆ. ಈಗಾಗಲೇ ಸಮ್ಮೇಳನದ ಸಿದ್ಧತೆಯು ಭರದಿಂದ ನಡೆಯುತ್ತಾ ಇದೆ. ಕಾಂ| ಕೆ. ಮೂಸಬ್ಬ ಅಧ್ಯಕ್ಷರಾಗಿ ಮತ್ತು ಕಾಂ|ವಾಸುಗಟ್ಟಿಯವರು ಕಾರ್ಯದರ್ಶಿಯಾಗಿರುವ 107 ಜನರ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸಮ್ಮೇಳನವನ್ನು ಯಶಸ್ವಿಗೊಳಿಸಲು ಬೇಕಾದ ಪ್ರಚಾರ ನಡೆಯುತ್ತಿದೆ.

ಸಾವಿರ ಬೀಡಿ ಕಟ್ಟಿದ್ದಕ್ಕೆ ರೂ. 12 ಮಜೂರಿ ದೊರೆಯಬೇಕು. ಪ್ರಾವಿಡೆಂಟ್ ಫಂಡಿನ ವ್ಯವಸ್ಥೆ ಸರಕಾರ ಕೂಡಲೆ ಸರಿಪಡಿಸಬೇಕು. ಕಂಟ್ರಾಕ್ಟ್ ಪದ್ಧತಿ ನಿಲ್ಲಬೇಕು. ಎಲೆ ತಂಬಾಕಿನ ಹೆಸರಿನಲ್ಲಿ ಮಜೂರರ ಮೇಲೆ ನಡೆಯುವ ಶೋಷಣೆ ನಿಲ್ಲಬೇಕು ಎಂಬ ಹೇಳಿಕೆಗಳ ಬಗ್ಗೆ ರಾಜ್ಯಾದ್ಯಂತ ಬೀಡಿ ಮಜೂರರ ಚಳುವಳಿಯನ್ನು ಸಂಘಟಿಸಲು ಈ ಸಮ್ಮೇಳನವು ಕಾರ್ಯಕ್ರಮವನ್ನು ರೂಪಿಸಲಿದೆ.

ಸಮ್ಮೇಳನದ ಅಂಗವಾಗಿ ತಾರೀಖು 25-4-82 ರಂದು ನಡೆಯುವ ಬಹಿರಂಗ ಸಭೆಯಲ್ಲಿ ಕಾಂ| ಸುಶೀಲಗೋಪಾಲನ್, ಕಾಂ| ವಿಮಲರಣದಿವೆ, ಕಾಂ| ಸೂರ್ಯನಾರಾಯಣರಾವ್, ಕಾಂ| ಸಿ. ಕಣ್ಣನ್, ಕಾಂ|ಟಿ ರಾಮಚಂದ್ರರಾವ್ ಮತ್ತು ಕಾಂ| ನಂಜುಂಡಪ್ಪ ಮುಂತಾದವರು ಭಾಗವಹಿಸಿ ಭಾಷಣಮಾಡಲಿರುವರು.

ಕ್ರಿಸ್ಪ್ ಬಿಸ್ಕಟ್ ಕಂಪನಿ

ಕಾರ್ಮಿಕರ ಧೀರ ಹೋರಾಟ

ಬೆಂಗಳೂರಿನ ಮೈಸೂರು ರಸ್ತೆಯಲ್ಲಿರುವ ಕ್ರಿಸ್ಪ್ ಬಿಸ್ಕಟ್ ಕಂಪನಿಯ ಕಾರ್ಮಿಕರು ಅಕ್ರಮ ವಜಾದ ವಿರುದ್ಧ ತೀವ್ರ ಹೋರಾಟದಲ್ಲಿದ್ದಾರೆ.

ಕಳೆದ ನಾಲ್ಕು ವರ್ಷಗಳಿಂದ ಅಸ್ತಿತ್ವದಲ್ಲಿರುವ ಈ ಕಂಪನಿಯಲ್ಲಿ ಸುಮಾರು 100 ಜನ ಕೆಲಸ ಮಾಡುತ್ತಿದ್ದಾರೆ.

ದೇಶದಲ್ಲೆ ಅತ್ಯಂತ ಬೆಲೆಏರಿಕೆ ನಗರವಾದ ಬೆಂಗಳೂರಿನಲ್ಲಿ ಕ್ರಿಸ್ಪ್ ಬಿಸ್ಕಟ್‌ನ ಕಾರ್ಮಿಕರ ವೇತನ ಎಷ್ಟು ಗೊತ್ತೇ ? ಕೇವಲ ರೂ. 3.50 ರಿಂದ ರೂ. 4.50 ಮಾತ್ರ, ಇ. ಎಸ್. ಐ., ಪಿ. ಎಫ್ : ಮುಂತಾದ ಸೌಲಭ್ಯಗಳೆಲ್ಲ ಹೋಗಲಿ, 8 ಘಂಟೆಗಿಂತ ಹೆಚ್ಚು ಕೆಲಸ ಮಾಡಿದರೂ ಒ. ಟಿ. ಸೌಲಭ್ಯವಿಲ್ಲ.

ಕಂಪನಿಯ ವರ್ಕ್ಸ್ ಮ್ಯಾನೇಜರ್ ಚೊಕ್ಕಲಿಂಗಂ ಅವರ ದರಬಾರಿನಲ್ಲಿ ಯಾವುದೇ ಸೌಲಭ್ಯ ಕೇಳಿದರೂ ಕೆಲಸದಿಂದ ವಜಾ ! ಕಂಪನಿಯಲ್ಲಿರುವ ಮಹಿಳಾ ಕಾರ್ಮಿಕರ ಮೇಲಂತೂ ಈ ವರ್ಕ್ಸ್ ಮ್ಯಾನೇಜರ್ ಹೇಳತೀರದ ಚೆಲ್ಲಾಟ ಮಾಡುತ್ತಿದ್ದಾರೆ.

ಇತ್ತೀಚೆಗೆ ತಾನೇ ಈ ಕಾರ್ಮಿಕರು ಸಿ.ಐ.ಟಿ.ಯು ನೇತೃತ್ವದಲ್ಲಿ ಸಂಘಟಿತರಾಗಿದ್ದಾರೆ.ಆಗಿನಿಂದ ಚಿತ್ರಹಿಂಸೆ ಇನ್ನು ಜೋರಾಗಿದೆ. ಒಬ್ಬೊಬ್ಬರನ್ನಾಗಿ ಕರೆದು ಸಂಘಕ್ಕೆ ರಾಜೀನಾಮೆ ಕೊಡುವ ಬೆದರಿಕೆ ಹಾಕಲಾಯಿತು. ಕಾರ್ಮಿಕರು ನಿರಾಕರಿಸಿದ್ದಕ್ಕೆ 18-2-82 ರಂದು 30 ಕೆಲಸಗಾರರನ್ನು ಕೆಲಸದಿಂದ ವಜಾ ಮಾಡಲಾಗಿದೆ. ವಜಾ ಮಾಡಲ್ಪಟ್ಟ ಕಾರ್ಮಿಕರಲ್ಲಿ 12 ಜನ ಮಹಿಳೆಯರು. ಮತ್ತೆ 26-2-82 ರಂದು ಸಂಘದ ಪದಾಧಿಕಾರಿಗಳನ್ನು, ಸಕ್ರಿಯ ಕಾರ್ಯಕರ್ತ (7 ಜನ) ರನ್ನೂ ವಜಾ ಮಾಡಲಾಗಿದೆ.

ಈ ಅಕ್ರಮ ವಜಾ, ದಬ್ಬಾಳಿಕೆಯನ್ನು ಪ್ರತಿಭಟಿಸಿ ಕ್ರಿಸ್ಪ್ ಬಿಸ್ಕಟ್ ಕಂಪನಿಯ ಕಾರ್ಮಿಕರು 22-3-82 ರಂದು ವಿಧಾನ ಸೌಧದೆದುರು ಧರಣಿ ಸತ್ಯಾಗ್ರಹ ಕೈಗೊಂಡರು. ವಜಾ ಮಾಡದಿರುವ ಕಾರ್ಮಿಕರಿಂದಲೇ ಎಲ್ಲ ಕೆಲಸವನ್ನೂ ಮಾಡಿಸಲಾಗುತ್ತಿದೆ. ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಮಹಿಳಾ ಕಾರ್ಮಿಕರಿಗೆ ಮಾನಭಂಗದ ಬೆದರಿಕೆ ಹಾಕಲಾಗಿದೆ.

ಅಮಾನುಷ ದಬ್ಬಾಳಿಕೆ ವಿರುದ್ಧ ಹೋರಾಡುತ್ತಿರುವ ಕಾರ್ಮಿಕರಿಗೆ ಜನ ಬೆಂಬಲ ದೊರಕಿಸಲು 20-3-82 ರಂದು ಕಂಪನಿ ಹತ್ತಿರದ ನಾಯಂಡನಹಳ್ಳಿಯಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ತೀವ್ರ ಹೋರಾಟದಲ್ಲಿರುವ ಕಾರ್ಮಿಕರನ್ನು ಬೆಂಬಲಿಸಬೇಕೆಂದು ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಆರ್.ಶ್ರೀನಿವಾಸ್‌ಮನವಿಮಾಡಿದ್ದಾರೆ.

ಸಿ. ಪಿ. ಐ. (ಎಂ) ಬೆಂಬಲ :

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೈಸೂರು ರೋಡ್ ಶಾಖೆಯು 23.3.82 ರಂದು ಸಭೆ ಸೇರಿ ಕ್ರಿಸ್ಪ್ ಬಿಸ್ಕಟ್ ಕಂಪನಿ ಕಾರ್ಮಿಕರಿಗೆ ಬೆಂಬಲ ವ್ಯಕ್ತಪಡಿಸಿದೆ. ವಜಾ ಮಾಡಿರುವ ಕಾರ್ಮಿಕರನ್ನು ಕೂಡಲೇ ಕೆಲಸಕ್ಕೆ ತೆಗೆದುಕೊಳ್ಳುವಂತೆ ಆಗ್ರಹಪಡಿಸಿದೆ.

ಸಿ. ಪಿ. ಐ. ನ ಅಪಪ್ರಲಾಪ

— ಎಂ. ಬಸವಪುನ್ನಯ್ಯ

> ಸಿ ಪಿ ಸಿ ಚಿತಾವಣೆಯಂತೆ ರಚಿತವಾದ ಪಕ್ಷವೊಂದು ೧೯೬೭ ರಲ್ಲಿದ್ದ ೬೧ ಲಕ್ಷದಿಂದ ೧೯೮೦ರಲ್ಲಿ ೧೫೨ ಲಕ್ಷ ಮತಗಳ ಬಲವನ್ನು ಹೇಗೆ ಪಡೆಯಿತು ಮತ್ತು ಅದೇ ಸಮಯದಲ್ಲಿ ಕಮ್ಯೂನಿಸ್ಟ್ (ಸಿನ್ಹಾ ಅವರ) ಪಕ್ಷವು ೭೫ ಲಕ್ಷ ೬೦ ಸಾವಿರ ಮತಗಳ ಬಲದಿಂದ ೫೧ ಲಕ್ಷಕ್ಕಿಳಿಯಿತು ಎನ್ನುವುದನ್ನು ನಮ್ಮ ಸಿ ಪಿ ಐ ನಾಯಕರು ಹೇಗೆ ವಿವರಿಸುತ್ತಾರೆ ?

[ಸಿ.ಪಿ.ಐ.ನ ಕರಡು ರಾಜಕೀಯ ಗೊತ್ತುವಳಿ ಕುರಿತು ಕಾಂ| ಬಸವಪುನ್ನಯ್ಯನವರು ಮಾಡಿದ ಟೀಕೆಗಳಿಗೆ (ಐಕ್ಯರಂಗ ಮಾ|| 14, 21 ಮತ್ತು 28ರ ಸಂಚಿಕೆಗಳನ್ನು ನೋಡಿ) ಸಿಪಿಐ ನ ಕೇಂದ್ರ ಮುಖಪತ್ರದ ಸಂಪಾದಕ ಇಂದ್ರದೀಪ್ ಸಿನ್ಹಾ ಅವರು ಸಿ.ಪಿ.ಐ. (ಎಂ) ಮೇಲೆ ಆಧಾರರಹಿತ ದೋಷಾರೋಪಣೆ ಮಾಡಿದ್ದರು (ಇಂದ್ರದೀಪ್ ಸಿನ್ಹಾರ ಲೇಖನವನ್ನು ಸಿ.ಪಿ.ಐ. ರಾಜ್ಯ ಸಮಿತಿ ಮುಖಪತ್ರ ಕೆಂಬಾವುಟ ಪ್ರಕಟಿಸಿದೆ).

ಇಂದ್ರದೀಪ್ ಸಿನ್ಹಾರ ದೋಷಣೆಗಳ ದಾಳಿಗೆ ಕಾಂ| ಬಸವಪುನ್ನಯ ಉತ್ತರಿಸಿದ್ದಾರೆ (ಮಾ|| 21ರ ಪೀಪಲ್ಸ್ ಡೆಮಾಕ್ರಸಿ). ಕಾಂ| ಎಂ. ಬಿ. ಯವರ ಲೇಖನದ ಸಂಕ್ಷಿಪ್ತ ಕನ್ನಡ ಅನುವಾದವನ್ನು ನಾವು ಪ್ರಕಟಿಸುತ್ತಿದ್ದೇವೆ.]

ಸಿ.ಪಿ.ಐ. ನ ಕೇಂದ್ರ ಮುಖಪತ್ರವಾದ 'ನ್ಯೂ ಏಜ್'ನ ಮಾರ್ಚಿ 14, 1982 ರ ಸಂಚಿಕೆಯಲ್ಲಿ ಅದರ ಸಂಪಾದಕ ಇಂದ್ರದೀಪ್ ಸಿನ್ಹಾರವರ ಲೇಖನ ಪ್ರಕಟವಾಗಿದೆ. ಸಿ.ಪಿ.ಐ. ನ ಕರಡು ರಾಜಕೀಯ ಗೊತ್ತುವಳಿ ಕುರಿತು ನಾನು ಮಾಡಿರುವ ಕೆಲವು ವಿಮರ್ಶಾತ್ಮಕ ಟೀಕೆಗಳಿಗೆ ಉತ್ತರಿಸುವ ನೆಪದಲ್ಲಿ ಸಿನ್ಹಾರವರು ಸಿ. ಪಿ. ಐ. (ಎಂ) ನ ವಿರುದ್ಧ, ಅದರ ಉಗಮ, ಅದರ ಇಂದಿನ-ಹಿಂದಿನ ರಾಜಕೀಯ ನಿಲುವು, ಅದರ ತಾತ್ವಿಕ-ಸೈದ್ಧಾಂತಿಕ ಆಧಾರ ಮುಂತಾದವುಗಳನ್ನು ಕುರಿತು ಮಿತಿ ಮೀರಿದ ಮಾತುಗಳ ಅ[illegible] ಹಿಡಿದಿದ್ದಾರೆ. ಇಂತಹ ದೂಷಣೆಗಳ ಧಾಳಿಯಿಂದ ನಾವು ಮಾಡಿರುವ ಟೀಕೆಗಳಿಗೆ ಉತ್ತರವನ್ನಾಗಲಿ ಅಥವಾ ನಮ್ಮ ನಡುವಣ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುವ ದೃಷ್ಟಿಯಿಂದ ಅಂತಹುಗಳನ್ನು ಸರಿಯಾಗಿ ಗುರುತಿಸುವುದಕ್ಕಾಗಲಿ ಸಹಕಾರಿಯಾಗಿಲ್ಲವೆಂದು ಹೇಳಲು ನನಗೆ ವಿಷಾದವಾಗುತ್ತದೆ. ತಾತ್ವಿಕ ವಾದವಿವಾದಕ್ಕಾಗಲಿ ಅಥವಾ ಎಡ ಮತ್ತು ಪ್ರಜಾಪ್ರಭುತ್ವ ಪರ್ಯಾಯ ಕಟ್ಟುವುದಕ್ಕಾಗಲಿ ಇಂತಹ ದಾಳಿ ಸಹಾಯಕವಾಗುವುದಿಲ್ಲ. ಇಂತಹ ಕೀಳು ದಾಳಿಯ ಮೂಲಕ ಸಿ.ಪಿ.ಐ. ನ ನಾಯಕತ್ವವು ಏನನ್ನು ಸಾಧಿಸ ಹೊರಟಿದೆ ಎಂದು ನನಗೆ ಅರ್ಥವಾಗುತ್ತಿಲ್ಲ.

ಅಸಹ್ಯ ಮತ್ತು ನಿಂದನಾತ್ಮಕ

ಈ ದಾಳಿ ಅಸಹ್ಯ ಮತ್ತು ನಿಂದನಾತ್ಮಕವೇಕೆಂದು ಒಂದೆರಡು ಸಂದರ್ಭಗಳನ್ನು ಉದಾಹರಿಸುತ್ತೇನೆ.

ನಾವು ಎತ್ತಿದ ಪ್ರಶ್ನೆಗಳಿಗೆ ಸಮಜಾಯಿಷಿ ನೀಡುವ ಬದಲು ಸಿನ್ಹಾ ಬರೆಯುತ್ತಾರೆ; "1957 ರ ಘೋಷಣಾ ಹೇಳಿಕೆಯಲ್ಲಿ ರೂಪಿಸಿದಂತೆ ಮತ್ತು 1960 ರ ಹೇಳಿಕೆಯಂತೆ ಸರ್ವಾನುಮತದಿಂದ ಒಪ್ಪಿದ್ದ ಅಂತರರಾಷ್ಟ್ರೀಯ ಚಳುವಳಿಯನ್ನು ಧಿಕ್ಕರಿಸಿದ ಚೀನಾ ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಪ್ರೇರೇಪಣೆಯಂತೆ ಸಿ. ಪಿ. ಐ.(ಎಂ) ನಾಯಕರುಗಳು 1964 ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವನ್ನು ಒಡೆದರು." ಇನ್ನೂ ಮುಂದೆ ಹೋಗಿ ಅವರು ಬರೆಯುತ್ತಾರೆ; "ಸಿ. ಪಿ. ಐ. (ಎಂ) ನಾಯಕತ್ವವು ಮಾವೋವಾದಕ್ಕೆ ಅಡಿಯಾಳಾಗಿದ್ದ ತನ್ನ ಪೂರ್ವ ಸ್ಥಿತಿಯಿಂದ ಬಹಳ ದೂರ ಬಂದಿದ್ದರೂ ಅದರಿಂದ ಸಂಪೂರ್ಣವಾಗಿ ಇನ್ನೂ ಹೊರಬಂದಿಲ್ಲ" ಅದರಿಂದಾಗಿ ಸಿ ಪಿ.ಸಿ ಮತ್ತು ಸಿ ಪಿ ಐ (ಎಂ) ಗಳನ್ನು ಮಾವೋವಾದದ ಹಿಡಿತದಿಂದ ರಕ್ಷಿಸುವ ಅಂತರರಾಷ್ಟ್ರೀಯ ಪ್ರಾಲಿಟೇರಿಯನ್ ಕರ್ತವ್ಯವು ಸಿ.ಪಿ ಐ ನ ಮೇಲೆ ಬಿದ್ದಿದೆ!

1955 ಮತ್ತು 1964 ರ ನಡುವಿನ ವರ್ಷಗಳಲ್ಲಿ ಕಮ್ಯುನಿಸ್ಟ್ ಪಕ್ಷದೊಳಗಿನ ಆಂತರಿಕ ಹೋರಾಟದ ಪರಿಚಯವಿರುವ ಯಾವುದೇ ವ್ಯಕ್ತಿಯು ಸಿನ್ಹಾರವರ ಈ ಘನವಾದ ವಿವೇಚನೆ ಕಂಡು ನಗುತ್ತಾನೆ. ಸಿ. ಪಿ. ಸಿ. ನಾಯಕತ್ವದ ಪ್ರೇರಣೆಯಂತೆ ಸಿ.ಪಿ.ಐ. (ಎಂ) ನಾಯಕರುಗಳು ಸಿ. ಪಿ. ಐ. ನಿಂದ ಸಿಡಿದು ಹೋದರು ಎಂದು ಬರೆಯುವ ದಾರ್ಷ್ಟ್ಯವನ್ನು ಸಂಪಾದಕರು ತೋರಿದ್ದಾರೆ. 1969–79 ರಲ್ಲಿ ಯಾರ ಪ್ರೇರಣೆಯಿಂದಾಗಿ ಸಿ.ಪಿ ಐ. ನಾಯಕರುಗಳು ಆಳುವ ಕಾಂಗ್ರೆಸ್ಸನ್ನು ಆಲಿಂಘಿಸಿಕೊಂಡಿದ್ದರು ? ಪಕ್ಷವು ಇಬ್ಭಾಗವಾಗಿ 20 ವರ್ಷಗಳ ನಂತರವೂ ಈ ಸುಳ್ಳನ್ನು ಪುನರುಚ್ಚರಿಸುತ್ತಿರುವುದು ಅವಿವೇಕದ ಪರಮಾವಧಿ. ಸಿ.ಪಿ.ಐ (ಎಂ) ಮತ್ತು ಸಿ.ಪಿ.ಐ. ಗಳ ನಡುವೆ ಐಕ್ಯತೆ ಮತ್ತು ಸಂಯುಕ್ತ ಕಾರ್ಯಾಚರಣೆಯನ್ನು ದೇಶದ ಅಧಿಕ ಸಂಖ್ಯೆಯ ಜನತೆ ಕಾತುರತೆಯಿಂದ ನಿರೀಕ್ಷಿಸುತ್ತಿರುವ ಈ ಸಮಯದಲ್ಲಿ ಸಿ.ಪಿ.ಐ. (ಎಂ) ನ ವಿರುದ್ಧ ರಾಡಿ ಎರಚುವ ಈ ಕೃತ್ಯವು ಬುದ್ಧಿವಂತಿಕೆಯಿಲ್ಲದ ಮತ್ತು ಅರಾಜಕೀಯವಾದ ಕೃತ್ಯವಾಗಿದೆ.

ವರ್ಗ ಸಹಯೋಗದ ನಿಲುವು

ಸಿ. ಪಿ. ಐ. ನಾಯಕತ್ವದ ಪ್ರಬಲ ವಿಭಾಗವು ಪ್ರತಿಪಾದಿಸಿದ ನಾಚಿಕೆಯಿಲ್ಲದ ವರ್ಗ ಸಹಯೋಗದ ರಾಜಕೀಯ ವಿಚಾರ ಸರಣಿಯಿಂದಾಗಿ ಪಕ್ಷವು ಒಡೆಯಿತೆಂದು ಸಿ.ಪಿ.ಐ. ನಾಯಕರುಗಳಿಗೆ ಅವರದೇ ಮಾತುಗಳಲ್ಲಿ ತಿರುಗಿಸಿ ಹೇಳುವುದು ಕಷ್ಟದ ಕೆಲಸವೇ ? ಇದರಿಂದಾಗಿಯೇ ಅಲ್ಲವೆ ಕೇರಳದಲ್ಲಿ ಮಾರ್ಕ್ಸಿಸ್ಟ್ ವಿರೋಧಿರಂಗ ಮತ್ತು ಸಂಯುಕ್ತ ಸರ್ಕಾರದ ರಚನೆಯಾದುದು. ಮತ್ತು ಅತಿಯಾಗಿ ದ್ವೇಷಿಸಲ್ಪಟ್ಟ ತುರ್ತು ಪರಿಸ್ಥಿತಿಯನ್ನು ಬೆಂಬಲಿಸುವಂತಾದುದು. ಈಗ ಅದರ ಬಗ್ಗೆ ಸಿನ್ಹಾರವರು ಉದಾಸೀನವಾಗಿ ಬರೆಯುತ್ತಾರೆ ;

"ತುರ್ತುಪರಿಸ್ಥಿತಿಗೆ ಬೆಂಬಲ ವ್ಯಕ್ತಪಡಿಸಿದುದರಲ್ಲಿ ತಪ್ಪಾಗಿದೆ !" ಈ ಎಲ್ಲ ರಾಜಕೀಯ ಪಾತಕಗಳನ್ನು ಮುಚ್ಚಿಕೊಂಡು ಸಿ. ಪಿ ಐ. (ಎಂ) ವಿರುದ್ಧ ದುರುದ್ದೇಶದ ಸುಳ್ಳುಗಳನ್ನು ಹೇಳುವುದೇಕೆ ? ಸಿ ಪಿ. ಸಿ. ಚಿತಾವಣೆಯಂತೆ ರಚಿತವಾದ ಪಕ್ಷವೊಂದು 1967ರಲ್ಲಿದ್ದ 61 ಲಕ್ಷದಿಂದ 1980 ರಲ್ಲಿ 152 ಲಕ್ಷ ಮತಗಳ ಬಲವನ್ನು ಹೇಗೆ ಪಡೆಯಿತು ಮತ್ತು ಅದೇ ಸಮಯದಲ್ಲಿ ಕಮ್ಯೂನಿಸ್ಟ್ (ಸಿನ್ಹಾ ಅವರ) ಪಕ್ಷವು 75 ಲಕ್ಷ 60 ಸಾವಿರ ದಿಂದ 51 ಲಕ್ಷಕ್ಕಿಳಿಯಿತು ಎನ್ನುವುದನ್ನು ನಮ್ಮ ಸಿ. ಪಿ. ಐ. ನಾಯಕರು ಹೇಗೆ ವಿವರಿಸುತ್ತಾರೆ ?

> 1955 ಮತ್ತು 1964 ರ ನಡುವಿನ ವರ್ಷಗಳಲ್ಲಿ ಕಮ್ಯುನಿಸ್ಟ್ ಪಕ್ಷದೊಳಗಿನ ಆಂತರಿಕ ಹೋರಾಟದ ಪರಿಚಯವಿರುವ ಯಾವುದೇ ವ್ಯಕ್ತಿಯು ಸಿನ್ಹಾರವರ ಈ ಘನವಾದ ವೀವೇಚನೆ ಕಂಡು ನಗುತ್ತಾನೆ. ಸಿ ಪಿ ಸಿ ನಾಯಕತ್ವದ ಪ್ರೇರಣೆಯಂತೆ ಸಿ ಪಿ ಐ (ಎಂ) ನಾಯಕರುಗಳು ಸಿ ಪಿ ಐ ನಿಂದ ಸಿಡಿದು ಹೋದರು ಎಂದು ಬರೆಯುವ ದಾರ್ಷ್ಟ್ಯವನ್ನು "ನ್ಯೂ ಏಜ್ " ಸಂಪಾದಕರು ತೋರಿದ್ದಾರೆ.
>
> 1969–79 ರ ಅವಧಿಯಲ್ಲಿ ಯಾರ ಪ್ರೇರಣೆಯಿಂದಾಗಿ ಸಿ ಪಿ ಐ ನಾಯಕರುಗಳು ಆಳುವ ಕಾಂಗ್ರೆಸ್ಸನ್ನು ಆಲಂಗಿಸಿ ಕೊಂಡಿದ್ದರು?
>
> ಪಕ್ಷವು ಇಬ್ಭಾಗವಾಗಿ ಸುಮಾರು ಎರಡು ದಶಕಗಳ ನಂತರವೂ ಈ ಸುಳ್ಳನ್ನು ಪುನರುಚ್ಚರಿಸುತ್ತಿರುವುದು ಅವಿವೇಕತನದ ಪರಮಾವಧಿ.

ನಮ್ಮ ಸಿ.ಪಿ ಐ. ನಾಯಕರು ಅಲ್ಲಿಗೆ ನಿಲ್ಲಿಸದೆ ಮುಂದುವರಿದು ಬರೆಯುತ್ತಾರೆ; "ನಕ್ಸಲ್‌ಬಾರಿ ಹೋರಾಟದೊಂದಿಗೆ ನವ ಪರಿಷ್ಕರಣವಾದಿ ಎಂದು ಸಿ. ಪಿ. ಐ. (ಎಂ) ನಾಯಕತ್ವವನ್ನು ಸಿ. ಪಿ. ಸಿ. ನಿರಾಕರಿಸಿ ಮತ್ತೊಮ್ಮೆ ಪಕ್ಷವನ್ನು ಒಡೆಯುವ ಪ್ರಯತ್ನ ಮಾಡಿದ ನಂತರ ಸಿ.ಪಿ.ಐ. (ಎಂ) ನಾಯಕತ್ವವು 'ಸ್ವತಂತ್ರ ಮಾರ್ಕ್ಸ್‌ವಾದ' ದ ಸೋಗು ಹಾಕಿಕೊಂಡಿತು ಮತ್ತು ಇಂದಿಗೂ ಅದಕ್ಕೆ ಅಂಟಿಕೊಂಡಿದೆ."

ಅಂತರರಾಷ್ಟ್ರೀಯ ಚಳುವಳಿ

ನಮ್ಮ ಈ ಸಿ.ಪಿ.ಐ. ಪಂಡಿತರಿಗೆ ಸಿ.ಪಿ ಐ(ಎಂ) ಸ್ವತಂತ್ರ ಮಾರ್ಕ್ಸ್‌ವಾದವನ್ನು ಅನುಸರಿಸುತ್ತಿದೆ ಎಂದು ಹೇಳಿದವರು ಯಾರೆಂದು ನಾವು ತಿಳಿಯಬಹುದೇ ? ಸಿ.ಪಿ ಐ. (ಎಂ) ಗೆ ಗೊತ್ತಿರುವುದು ಕೇವಲ ಮಾರ್ಕ್ಸ್‌ವಾದ ಮತ್ತು ಮಾರ್ಕ್ಸ್‌ವಾದ–ಲೆನಿನ್‌ವಾದ. 'ಸ್ವತಂತ್ರ ಮಾರ್ಕ್ಸ್‌ವಾದ'ವಾಗಲಿ ಅಥವಾ 'ಅವಲಂಬಿತ ಮಾರ್ಕ್ಸ್‌ವಾದ' ಗಳಲ್ಲಾಗಲಿ, ಅದಕ್ಕೆ ನಂಬಿಕೆಯಿಲ್ಲ. ಸಿ.ಪಿ.ಐ.(ಎಂ) ಪ್ರತಿಪಾದಿಸುವುಧೆಂದರೆ ಪ್ರತಿಯೊಂದು ಕಮ್ಯುನಿಸ್ಟ್ ಪಕ್ಷವೂ ತಾನು ಕೆಲಸ ಮಾಡುವ ದೇಶದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ಸ್ವತಂತ್ರವಾಗಿ ಅದ್ಯಯನಮಾಡಿ ವೀಕ್ಷಿಸಬೇಕಲ್ಲದೆ ಬೇರೆಯವರ ಅನುಭವವನ್ನು ಅನುಸರಿಸುವುದಾಗಲಿ ಎರವಲು ಪಡೆಯುವುದಾಗಲಿ ಮಾಡಬಾರದು. ಇದನ್ನು ಸ್ವತಂತ್ರ ಮಾರ್ಕ್ಸ್‌ವಾದದ ಸೋಗು ಎಂದು ಜರಿಯುವ ಮಟ್ಟಕ್ಕೆ ಏಕೆ ಇಳಿಯಬೇಕು ?

ಇಂತಹ ಸೋಗುಗಳಲ್ಲಿ ಸಿ ಪಿ.ಐ. (ಎಂ) ಗೆ ನಂಬಿಕೆಯಿಲ್ಲ. ಅಂತಹ ಸೋಗುಗಳನ್ನೇನಾದರೂ ಗುರುತಿಸುವುದಾದರೆ ನಮ್ಮ ಸಿ ಪಿ.ಐ. ನಾಯಕತ್ವದಲ್ಲಿ ಕಾಣಬಹುದು. ಸಿನ್ಹಾರವರ ಅಂತಹ ಸೋಗುಗಳನ್ನು ಉದಾಹರಿಸಬೇಕೆಂದರೆ ; ಅವರು ಬರೆಯುತ್ತಾರೆ.: "ಸಿ. ಪಿ. ಐ. (ಎಂ) ನಾಯಕತ್ವದ ತಿಳುವಳಿಕೆ ಅಂತಹುದಾಗಿದ್ದರೆ ಚೀನಾದ ಕಮ್ಯುನಿಸ್ಟ್ ಪಕ್ಷವನ್ನು ಮಾರ್ಕ್ಸ್‌ವಾದ-ಲೆನಿನ್‌ವಾದದ ದಾರಿಗೆ ಹಿಂತಿರುಗಿಸುವ ಅಂತರ ರಾಷ್ಟ್ರೀಯ ಚಳುವಳಿಯ ಪ್ರಯತ್ನದೊಂದಿಗೆ ಕೈ ಜೋಡಿಸುವುದಕ್ಕೆ ಅದಕ್ಕೆ ಯಾವುದೇ ಸಂಕೋಚವಿರಬಾರದು." ಅವರು ಗಂಭೀರವಾಗಿ ಸಿ.ಪಿ ಐ. (ಎಂ) ಕುರಿತು ಹೇಳುತ್ತಾರೆ, "ಅಂತರ ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಮುಖ್ಯ ಪ್ರವಾಹದೊಂದಿಗೆ ಹಿಂದಿರುಗುವ ಮೊದಲೇ ಸಾಮೂಹಿಕ ಮತ್ತು ರಾಜಕೀಯ ಕಾರ್ಯಾಚರಣೆಯಲ್ಲಿ ಐಕ್ಯತೆ ಮತ್ತು ಸಹಕಾರಗಳು ವೃದ್ಧಿಗೊಳ್ಳಬಹುದು."

ಅವರ ಎರಡು ಉಪದೇಶಗಳೆಂದರೆ ; ಮೊದಲನೆಯದು ಅಂತರ ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯು ಸಿ. ಪಿ. ಸಿ. ಯನ್ನು ಮಾರ್ಕ್ಸ್‌ವಾದ-ಲೆನಿನ್‌ವಾದದ ಪಥಕ್ಕೆ ತರುವ ಪ್ರಯತ್ನ ಮಾಡುತ್ತಿದೆ. ಎರಡನೆಯದೆಂದರೆ ಸಿ. ಪಿ. ಐ. (ಎಂ) ಅಂತರರಾಷ್ಟ್ರೀಯ ಚಳುವಳಿಯಲ್ಲಿ ಹಿಂದಿರುಗುವ ಮೊದಲೆ ಸಂಯುಕ್ತ ರಾಜಕೀಯ ಮತ್ತು ಸಾಮೂಹಿಕ ಕಾರ್ಯಾಚರಣೆಯಲ್ಲಿ ಸಿ ಪಿ ಐ(ಎಂ) ಭಾಗವಹಿಸಲು ಅವಕಾಶವನ್ನು ಸಿ.ಪಿ.ಐ. ದಯಪಾಲಿಸುತ್ತದೆ. ಇದರೊಂದಿಗೆ ಸಿ.ಪಿ.ಐ. (ಎಂ) ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳವಳಿಯ ಪರವೊ ವಿರೋಧವೊ ಎಂಬ ಪ್ರಶ್ನೆ ಎತ್ತುತ್ತಾರೆ.

ಈ ಪಕ್ಷಗಳ ಬಗ್ಗೆ ಏನು ಹೇಳುತ್ತೀರಿ ?

ಫ್ರಾನ್ಸ್, ಇಟಲಿ, ಜಪಾನ್, ಬ್ರಿಟನ್, ರೂಮಾನಿಯಾ ಕಮ್ಯುನಿಸ್ಟ್ ಪಕ್ಷಗಳು, ಕೋರಿಯಾದ ವರ್ಕರ್ಸ್ ಪಾರ್ಟಿ, ಯುಗೋಸ್ಲಾವಿನ ಕಮ್ಯುನಿಸ್ಟ್ ಲೀಗ್ ಮತ್ತಿನ್ನಿತರ ಪಕ್ಷಗಳು ಇಂತಹ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಅಂಗವೇ. ಮತ್ತು ಚೀನಾದ ಕಮ್ಯುನಿಸ್ಟ್ ಪಕ್ಷವನ್ನು ಮಾರ್ಕ್ಸ್‌ವಾದ-ಲೆನಿನ್‌ವಾದದ ಪಥಕ್ಕೆ ಪುನಃ ತರುವ ಹೋರಾಟದಲ್ಲಿ ಈ ಎಲ್ಲ ಪಕ್ಷ

[6ನೇ ಪುಟವನ್ನು ನೋಡಿ]

ಮತಾಂತರದಿಂದ ಸಮಾನತೆ ಸಾಧ್ಯವೆ ?

— ಜನಕರಾಜ

1982 ಏಪ್ರಿಲ್ ತಿಂಗಳ ಕೊನೆಯ ಭಾಗದಲ್ಲಿ ವಿಶ್ವ ಹಿಂದೂ ಸಮ್ಮೇಳನವೊಂದು ಶ್ರೀಲಂಕಾದಲ್ಲಿ ಜರುಗಲಿದೆ. ಈ ಸಮ್ಮೇಳನದಲ್ಲಿ ಸುಮಾರು 40 ದೇಶದ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ಹಿಂದೂ ಧರ್ಮದ ಪ್ರಗತಿಯ ಉದ್ದೇಶವನ್ನಿಟ್ಟುಕೊಂಡಿರುವ ಈ ಸಮ್ಮೇಳನದಲ್ಲಿ ಭಾರತ ದೇಶದ ಪ್ರತಿನಿಧಿಗಳೂ ಭಾಗವಹಿಸಬಹುದು. ಇತ್ತೀಚೆಗೆ ಭಾರತದಲ್ಲಿ ಶ್ರೀಲಂಕಾದ ದಿಕ್ಕಿನ ಕಡೆಯೇ ಇರುವ ತಮಿಳು ನಾಡಿನ ಮೀನಾಕ್ಷಿಪುರಂ ಮತ್ತು ಇತರೆ ಕಡೆಗಳಲ್ಲಿ ದಲಿತರು ಸಾಮೂಹಿಕವಾಗಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡದ್ದು ಮತ್ತು ಹಲವು ಕಡೆಗಳಲ್ಲಿ ಮತಾಂತರಗೊಳ್ಳುವ ಸುದ್ದಿ ಇಡೀ ದೇಶದ ತುಂಬೆಲ್ಲಾ ಹಬ್ಬಿತ್ತು. ಹಿಂದೂ ಧರ್ಮದ ಕ್ರೂರ, ಅಮಾನವೀಯ ವರ್ತನೆಗೆ ಸಿಕ್ಕಿ ಶತಮಾನಗಳಿಂದಲೂ ಕೊರಗಿದ ಜನ ಕೊರಳ ಧನಿ ಎತ್ತಿ ಧಿಕ್ಕರಿಸಿ, ಸಾಮಾಜಿಕ ಸಮಾನತೆಯ ಹಂಬಲದಿಂದ ಬೇರೊಂದು ಧರ್ಮದ ಆಸರೆ ಪಡೆಯುತ್ತಿರುವುದು ಹೊಸದೇನಲ್ಲ. ಅಂಬೇಡ್ಕರ್ ಬೌದ್ಧ ಧರ್ಮ ಸ್ವೀಕಾರ ಮಾಡಿದ ನಂತರ ಮೀನಾಕ್ಷಿಪುರಂ ಘಟನೆಯೇ ದೇಶದ ಗಮನ ಸೆಳೆದಿರುವ ಮತಾಂತರ. ಈ ಮಧ್ಯೆ ಅಲ್ಲೊಬ್ಬರು ಇಲ್ಲೊಬ್ಬರಂತೆ ಸಾವಿರ ಸಂಖ್ಯೆಯಲ್ಲಿ ಕ್ರೈಸ್ತ ಮತ್ತಿತರ ಧರ್ಮಗಳಿಗೆ ಮತಾಂತರಗೊಂಡಿದ್ದರೂ ಸುದ್ದಿಯಾಗಿರಲಿಲ್ಲ.

ಈ ಹಿಂದಿನ ಮತಾಂತರಗಳು ಪಟ್ಟಣ ಮತ್ತು ನಗರಗಳಲ್ಲಿ ವಿದ್ಯಾವಂತ ಉದ್ಯೋಗಸ್ಥರ ನಡುವೆ ಮಾತ್ರ ನಡೆಯುತ್ತಿದ್ದವು. ಈಗ ಮತಾಂತರದ ಗಾಳಿ ಹಳ್ಳಿಗಳ ಕಡೆಯೂ ಬೀಸುತ್ತಿದೆ. ಇತ್ತೀಚಿನ ದೇಶದ ಸುದ್ದಿಯ ಕೇಂದ್ರವಾಗಿರುವ ತಮಿಳು ನಾಡಿನ ಮೀನಾಕ್ಷಿಪುರಂ ಒಂದು ಚಿಕ್ಕಹಳ್ಳಿ. ಆ ಹಳ್ಳಿಯಲ್ಲಿ ಮತಾಂತರಗೊಂಡವರಲ್ಲಿ ವಿದ್ಯಾವಂತ ಉದ್ಯೋಗಸ್ಥರ ಸಂಖ್ಯೆ ಗಣನೀಯವಾಗಿರಬಹುದು. ಆದರೆ ಮೀನಾಕ್ಷಿಪುರಂನಲ್ಲಿ ಮತಾಂತರಗೊಂಡವರಲ್ಲಿ ಬಹಜನ ಅವಿದ್ಯಾವಂತರೆಂಬುದನ್ನು ಗಮನಿಸಬೇಕು. ಇಲ್ಲಿಯವರೆಗೆ, ಜಾತಿಯ ಮಾನಸಿಕ ವೇದನೆ ಅನುಭವಿಸುತ್ತಿದ್ದ ವಿದ್ಯಾವಂತ ಉದ್ಯೋಗಸ್ತ ದಲಿತರು ಮತಾಂತರಕ್ಕೆ ಮನಸ್ಸು ಕೊಡುತ್ತಿದ್ದರು. ಈಗ ಜಾತಿಯ ಶೋಷಣೆಯಲ್ಲಿ ದೈಹಿಕವಾಗಿ ಬೆಂದ ಅವಿದ್ಯಾವಂತ ಹಳ್ಳಿಯ ದಲಿತರೂ ಕೂಡ ಹಿಂದೂಧರ್ಮದ ವಿರುದ್ಧ ಸಿಡಿ ಬಾಂಬುಗಳಾಗುತ್ತಿದ್ದಾರೆ. ಮೀನಾಕ್ಷಿಪುರಂನಲ್ಲಿ ಧರ್ಮ, ಜಾತಿಯ ವಿರುದ್ಧ ಸಿಡಿದ ಬಾಂಬು ಇಡೀ ದೇಶವನ್ನೇ ಆವರಿಸಬಹುದು.

ಆರ್ಥಿಕ ಅಸಮಾನತೆಯಿಂದಾಗಿ ಜಾತಿ ಇದೆ. ಕೇವಲ ಆರ್ಥಿಕ ಹೋರಾಟವಾದರೆ ಜಾತಿ ವಿನಾಶ ಸಾಧ್ಯವೆನ್ನುವ ಜನರೂ ಇದ್ದಾರೆ. ಈ ದೇಶದ ಉನ್ನತ ದಲಿತ ರಾಜಕಾರಣಿಯೊಬ್ಬ ಸ್ವರೂಪಾನಂದರ ಪ್ರತಿಮೆಯನ್ನ ಅನಾವರಣ ಮಾಡಿದಾಗ ಜಾತೀವಾದಿ ಹಿಂದೂಗಳು ಸಗಣಿ ನೀರು ಚಿಮುಕಿಸಿ ಗಂಗಾಜಲದಿಂದ ಸ್ವಚ್ಛಗೊಳಿಸಿದ್ದಾರೆ. ದಲಿತರನ್ನು ಪ್ರಾಣಿಗಳಿಗಿಂತಲೂ ಕಡೆಯಾಗಿ ಕಾಣುತ್ತಿರುವುದೂ ಅಲ್ಲದೆ, ಸಗಣಿಗಿಂತಲೂ ಕಡೆ ಎನ್ನುವುದನ್ನು ಆಚರಿಸಿ ಸಾಬೀತು ಪಡಿಸಿದ್ದಾರೆ. ಆದು ಕೇವಲ ಆರ್ಥಿಕ ಹೋರಾಟದಿಂದ ಸಾಮಾಜಿಕ ಸಮಾನತೆ ಸಾಧ್ಯ ಎನ್ನುವ ಜನಕ್ಕೆ ಬಹುಶಃ ಉತ್ತರವಾಗಬಹುದು.

ಹಿಂದೂ ಧರ್ಮ, ಅಂಬೇಡ್ಕರ್ ಮತ್ತು ದಲಿತರು

ಅಂಬೇಡ್ಕರರು ಧರ್ಮ ಮಾನವನ ಉಪಯೋಗಕ್ಕೆ ಇರಬೇಕೆ ಹೊರತು ಧರ್ಮಕ್ಕೆ ಮಾನವ ಸಾಧನವಾಗಬಾರದು ಎಂದು ಹೇಳುತ್ತಾ 'ಯಾವ ಧರ್ಮ ಇಬ್ಬರು ಅನುಯಾಯಿಗಳ ಮಧ್ಯೆ ಭೇದವನ್ನೆಣಿಸುತ್ತದೆಯೋ ಆ ಧರ್ಮ ಪಕ್ಷಪಾತವಾದದ್ದು ಮತ್ತು ಕೋಟ್ಯಾಂತರ ಅನುಯಾಯಿಗಳನ್ನು ನಾಯಿಗಳಿಗಿಂತ ಕಡೆಯಾಗಿ ಕಂಡು ಕೈದಿಗಳ ರೀತಿಯಲ್ಲಿ ನಡೆಸಿಕೊಂಡು ಸಹಿಸಲಸಾಧ್ಯ ದೌರ್ಬಲ್ಯದ ಹೊರೆಯನ್ನು ಅವರ ಮೇಲೆ ಹೊರೆಸಿದೆಯೋ ಆ ಧರ್ಮ ಧರ್ಮವೇ ಅಲ್ಲ. ಅಂತಹ ಪಕ್ಷಪಾತದ ಕ್ರಮಕ್ಕೆ ಧರ್ಮ ಎನ್ನುವ ಬಿರುದು ಬೇಡ' ಎನ್ನುತ್ತಾರೆ. (The religion which discriminates between two followers is partial and the riligion which treats crores of its adherents worse than dogs and criminals and inflicts upon them insufferable disabilities is no religion at all. Religion is not the appellation for such an unjust order.)

ಹಿಂದೂ ಧರ್ಮದ ನರನಾಡಿಯನ್ನೆಲ್ಲಾ ಕಿತ್ತು ಶೋಧಿಸಿದರೂ ಅಂಬೇಡ್ಕರ್‌ಗೆ ಇದ್ದ ಧರ್ಮದ ಕಲ್ಪನೆಯ ಕುರುಹೂ ಕೂಡ ಕಾಣಲಾಗುವುದಿಲ್ಲ. ಹಿಂದೂ ಅಸ್ಪೃಶ್ಯನಾಗಿ ಹುಟ್ಟಿದೆ, ಅದನ್ನು ತಡೆಯುವುದು ನನ್ನ ಶಕ್ತಿಯನ್ನು ಮೀರಿತ್ತು. ಆದರೆ ಹಿಂದೂವಾಗಿ ಸಾಯಲಾರೆ,ಎಂದು ಅಂಬೇಡ್ಕರ್ ನೋವಿನಿಂದ ಹೇಳುತ್ತಾರೆ. ಹಿಂದೂ ಧರ್ಮದಲ್ಲಿ ಹುಟ್ಟುವುದೇ ಮಹಾ ಅಪರಾಧ ಎನ್ನುವಂತೆ ಅಂಬೇಡ್ಕರ್ ಮಾತನಾಡಬೇಕಾದರೆ ಈ ದೇಶದ ಜನಸಂಖ್ಯೆಯ ಶೇಕಡಾ 20 ರಷ್ಟಿರುವ ದಲಿತರ ಬದುಕಿನ ಅರಿವು ಯಾರಿಗಾದರೂ ಆಗುತ್ತದೆ.

ಅಸಮಾನತೆಯ ಆಧಾರಸ್ತಂಭಗಳ ಮೇಲೆ ನಿಂತಿರುವ ಹಿಂದೂ ಧರ್ಮದಲ್ಲಿ ದಲಿತರು ಒಳ್ಳೆಯ ಬಟ್ಟೆ ತೊಡುವ ಹಾಗಿಲ್ಲ, ಒಳ್ಳೆಯ ಊಟ ಮಾಡುವ ಹಾಗಿಲ್ಲ, ಕುಡಿಯಲು ನೀರೂ ಇಲ್ಲ, ಮನೆಯಿಲ್ಲ, ಭೂಮಿಯಿಲ್ಲ, ಕೆಲವೆಡೆಗಳಲ್ಲಿ ದಲಿತರು ಇಂತಹ ಕಡೆ ತಿರುಗಾಡಬಹುದು, ಇಂತಹ ಕಡೆ ತಿರುಗಾಡಬಾರದು ಎಂಬ ನಿಬಂಧಗಳೂ ಉಂಟು. ಅಷ್ಟೇಕೆ ದಲಿತರು ಕೆಲವೆಡೆಗಳಲ್ಲಿ ಒಳ್ಳೆಯ ಗಾಳಿಯನ್ನೂ ಸಹ ಸೇವಿಸಲು ಆಗುತ್ತಿಲ್ಲ. ಜಾತೀ ಹಿಂದೂಗಳ ಕೈಗೆ ಎಟುಕದ ವಸ್ತುಗಳೆಂದರೆ ಸೂರ್ಯ ಚಂದ್ರರ ಬೆಳಕು ಮತ್ತು ಗಾಳಿ. ಕೈಗೆ ಸಿಗುತ್ತಿದ್ದರೆ ಇವು ಕೂಡ ಧರ್ಮದ ಹೆಸರಿನಲ್ಲಿ ದಲಿತರಿಂದ ದೂರ ಸರಿಯುತ್ತಿದ್ದವು. ಅಂದರೆ ಬದುಕಲು ಯಾವು ತೀರಾ ಅಗತ್ಯವೋ ಅಂತಹುಗಳನ್ನು ಧರ್ಮ ನಿರ್ಬಂಧಿಸಿದೆ, ಅಂದ ಮೇಲೆ ಆ ಧರ್ಮವನ್ನೇ ಪ್ರಶ್ನಿಸಬೇಕಾಗುತ್ತದೆ.

ಕ್ರೈಸ್ತ ಧರ್ಮ ಮತ್ತು ದಲಿತರು

ಹಿಂದೂ ಧರ್ಮದಲ್ಲಿನ ಈ ಅಸಮಾನತೆ, ಅಮಾನವೀಯತೆಯ ಲಾಭ ಪಡೆಯಲು ಬೇರೆ ಬೇರೆ ಧರ್ಮಗಳು ಹವಣಿಸುತ್ತಿವೆ. ಅಂಬೇಡ್ಕರ್, ಹಿಂದೂ ಧರ್ಮ ತ್ಯಜಿಸಿ ಬೇರೊಂದು ಧರ್ಮವನ್ನ ಸ್ವೀಕರಿಸುವುದಾಗಿ ಘೋಷಿಸಿದಾಗ ಹೊಸ ಸೇರ್ಪಡೆಗಳ ಕನಸು ಕಂಡ ಮಸೀದಿ ಮತ್ತು ಚರ್ಚುಗಳು ಬಾಗಿಲು ತೆರೆದು ಸ್ವಾಗತಕ್ಕೆ ಸಿದ್ಧವಾಗಿದ್ದವು. ಸ್ವಾತಂತ್ರ್ಯ ಪೂರ್ವದಲ್ಲಂತೂ ಕ್ರೈಸ್ತ ಧರ್ಮ ಹಿಂದೂ ಧರ್ಮದ ಅಸಮಾನತೆಯನ್ನು ಗುರುತಿಸಿ, ದಯಾಳುತನ ಮತ್ತು ಸೇವಾ ಮನೋವೃತ್ತಿಯ ತಂತ್ರಗಳನ್ನು ಯತೇಚ್ಛವಾಗಿ ಬಳಸಿ,ಶೋಷಿತ ಜನಾಂಗದಲ್ಲಿನ ವಿದ್ಯಾವಂತರನ್ನು ಸೆಳೆಯುವುದರಲ್ಲಿ ಯಶಸ್ವಿಯಾಯಿತು. ಇದರ ಫಲವಾಗಿ ಸಾವಿರ ಸಂಖ್ಯೆಯಲ್ಲಿ ದಲಿತರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರು.

ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ದಲಿತರ ಬದುಕಿನಲ್ಲಿ ಅಂತಹ ಬದಲಾವಣೆ ಏನೂ ಆಗಲಿಲ್ಲ. ಮತ ಬದಲಾಯಿಸಿದ್ದರಲ್ಲಷ್ಟೆ ತೃಪ್ತಿಗೊಳ್ಳಬೇಕಾಯಿತು. ಮತ್ತು ಕ್ರೈಸ್ತ ಧರ್ಮದ ಆಗಮನದಿಂದಲೂ ಭಾರತದ ದಲಿತರ ಸಾಮಾಜಿಕ-ಆರ್ಥಿಕ ಸ್ಥಿತಿ ಸ್ಥಗಿತವಾಗಿಯೇ ಇದ್ದು, ಬ್ರಿಟೀಷರ ಆಡಳಿತದ ಕೊನೆಯ ತಾಸಿನವರೆಗೂ ಜಾತೀಯತೆಯ ಪಿಡುಗು ಮುಂದುವರಿಯುತ್ತಲೇ ಹೋಯಿತು. ಕ್ರೈಸ್ತ ಧರ್ಮ ಪ್ರಚಾರಕರು ಹಿಂದೂ ಧರ್ಮದ ಜಾತಿಯ ಕ್ರೂರತೆಯನ್ನಾಗಲಿ, ಆರ್ಥಿಕ ಶೋಷಣೆಯನ್ನಾಗಲಿ ಮತ್ತು ರಾಜಕೀಯ ಗುಲಾಮಗಿರಿತನವನ್ನಾಗಲಿ ತೊಲಗಿಸುವಲ್ಲಿ ಸಂಪೂರ್ಣ ವಿಫಲರಾದರು.

ಸಮಾನತೆಯನ್ನು ಬಯಸಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ದಲಿತರನ್ನು ಕ್ರೈಸ್ತರೂ ಸಮಾನವಾಗಿ ಕಾಣುತ್ತಿಲ್ಲ. ಅಲ್ಲಿಯೂ ಕೂಡ ದಲಿತರಿಗೆ ಪ್ರತ್ಯೇಕ ಚರ್ಚುಗಳಿರುತ್ತವೆ, ಇಲ್ಲವೆ ಪ್ರತ್ಯೇಕ ಪ್ರಾರ್ಥನಾ ಸಮಯವನ್ನು ನಿಗದಿಪಡಿಸಿರುತ್ತಾರೆ. ಕ್ರೈಸ್ತ ಧರ್ಮದಲ್ಲೂ ಕೂಡ ದಲಿತರು ಅಸ್ಪೃಶ್ಯರಾಗಿಯೇ ಉಳಿದಿದ್ದಾರೆ.

ಮುಸ್ಲಿಂ ಧರ್ಮ ಮತ್ತು ದಲಿತರು.

ಈ ಹಿಂದೆ ದಲಿತರು ಕ್ರೈಸ್ತ ಧರ್ಮಕ್ಕೊ, ಬೌದ್ಧ ಧರ್ಮಕ್ಕೊ ಮತಾಂತರಗೊಳ್ಳುತ್ತಿದ್ದರು. ಈಗ ದಲಿತರು ಇಸ್ಲಾಂ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ದಲಿತರು ಯಾವುದೇ ಧರ್ಮಕ್ಕೆ ಮತಾಂತರಗೊಂಡರೂ ಅದರ ಹಿಂದಿರುವ ಉದ್ದೇಶ ಸಮಾನತೆಯ ಹಂಬಲವೆ. ದಲಿತರುಸಾಮೂಹಿಕವಾಗಿ ಮುಸ್ಲಿಂ ಧರ್ಮಕ್ಕೆ ಸಮುದಾಯದಲ್ಲಿ ಎಷ್ಟು ಸಮಾನತೆ ಇದೆ, ಎಷ್ಟು ಅಂತರಗಳಿವೆ ಎಂಬುದನ್ನು ಗಮನಿಸಬೇಕಾಗಿದೆ. ಮತ್ತು ಮತಾಂತರಗೊಂಡ ದಲಿತರನ್ನು ಯಾವ ರೀತಿ ಕಾಣುತ್ತಾರೆ ಎನ್ನುವುದನ್ನು ಕೂಡ ಯೋಚಿಸಬೇಕಾಗಿದೆ.

ಶೇಖ್, ಮಲ್ಲಿಕ್, ಸೈಯದ್ ಮತ್ತು ಪಠಾಣ ಇವರುಗಳು ಮುಸ್ಲಿಂ ಸಮುದಾಯದ ಮೇಲಿನವರು. ಹಿಂದೂಗಳಂತೆಯೆ ಅವರಲ್ಲಿಯೂ ಕಸುಬಿನಾಧಾರದ ಮೇಲೆ ಜಾತಿಯ ವಿಂಗಡಣೆಗಳಿವೆ.-ಮೋಮಿನ (ನೇಕಾರ), ನದಾಫ್ (ಹಾಸಿಗೆ ಇತ್ಯಾದಿಗಳನ್ನು ಮಾಡುವವನು), ನಾಲ್‌ಬಂದ್ (ಲಾಳಾ ಕಟ್ಟುವವನು), ಜಾಡ್ ಮಾಲಿ, ಹಲಾಲ್ ಖೋರ (ಬೀದಿಗಳ ಕಸಾ ಗುಡಿಸುವವರು), ಚಮ್ಮಾರ (ಚರ್ಮದ ಕೆಲಸದವನು), ಜುಲಾಯಿ (ಬಟ್ಟೆ ನೇಯುವವನು), ಮಚ್ಛಲ್‌ಹಾರ್ (ಮೀನು ಹಿಡಿಯುವವನು), ಮತ್ತು ಇನ್ನು ಅನೇಕ ವಿಂಗಡಣೆಗಳಿವೆ. ಇದರಲ್ಲಿಯ ಮೇಲಿನವರಿಗು ಮತ್ತು ಕೆಳಗಿನವರಿಗು ಮದುವೆ, ಆಚಾರ ಮತ್ತು ವಿಚಾರಗಳಲ್ಲಿ ವ್ಯತ್ಯಾಸಗಳಿವೆ. ಈ ಎರಡೂ ವರ್ಗದವರಲ್ಲಿ ಶುಕ್ರವಾರಗಳು ಮತ್ತು ರಂಜಾನ್, ಬಕ್ರೀದ್ ಹಬ್ಬದ ದಿನಗಳ ಪ್ರಾರ್ಥನೆಗಳಲ್ಲಿ ಸ್ವಲ್ಪ ಗಂಟೆಗಳ ಕಾಲ ಮಾತ್ರ ಆಧ್ಯಾತ್ಮಿಕ ಸಮಾನತೆ ಇರುತ್ತದೆ. ಅವರಲ್ಲಿಯೂ ಶ್ರೀಮಂತ-ಬಡವ, ಮೇಲು- ಕೀಳು ಭಾವನೆಇದ್ದು ಕೆಳಗಿನವರ ಮೇಲೆ ಮೇಲಿನವರ ಆರ್ಥಿಕ, ರಾಜಕೀಯ ಶೋಷಣೆ ನಡೆಯುತ್ತಲೇ ಇದೆ. ಇದು ಒಂದು ಕಡೆಯಾದರೆ ಬೆಳಗಾವಿ ಜಿಲ್ಲೆಯಲ್ಲಿ ಮತಾಂತರಗೊಂಡ ದಲಿತರಿಗೆ ಪ್ರತ್ಯೇಕ ಮಸೀದಿ ಇರುವ ವಿಚಾರವೂ ಕೇಳಿ ಬರುತ್ತಿದೆ.

(ಮುಂದುವರೆಯುವುದು)

ಸಿದ್ದಾಪುರ (ಕೊಡಗು)

ಹರಿಜನರ ಗುಡಿಸಲಿಗೆ ಬೆಂಕಿ

27-3-82 ರಂದು ಸಾಯಂಕಾಲ ನೆಲ್ಲಹಂದಿಕೇರಿಯ ಬಳಿ ಮಂಜೂರಾಗಿದ್ದ ಗೋಮಾಳ ಪೈಸಾರಿಯಲ್ಲಿ ಮನೆಕಟ್ಟಿಕೊಂಡು ವಾಸವಾಗಿದ್ದ ಹರಿಜನರ ಗುಡಿಸಲುಗಳನ್ನು ಬೆಂಕಿ ಹಚ್ಚಿ ಸುಟ್ಟು ಹಾಕಿದ್ದೂ ಅಲ್ಲದೇ ಹರಿಜನರನ್ನು ಗೂಂಡಾಗಳ ನೆರವಿನಿಂದ ಓಡಿಸಿದ ಘಟನೆ ನಡೆದಿದೆ. ಗಾಯಕ್ಕೆ ಬರೆಕೊಟ್ಟಂತೆ ಮತ್ತೆ ಹರಿಜನರನ್ನೇ ಬಂಧಿಸಿದ ತೊಘಲಕ್ ಕೃತ್ಯ ನಡೆದಿದೆ.

ಹರಿಜನರ ಗುಡಿಸಲುಗಳಿಗೆ ಬೆಂಕಿ ಹಚ್ಚುವ ಕೃತ್ಯ ನಡೆಸಿದವ ಯಾರು ಗೊತ್ತೆ ? ಹರಿಜನರ ಯೋಗಕ್ಷೇಮದ ಗುತ್ತಿಗೆ ಹೊತ್ತಿರುವ ಇಂದಿರಾ ಕಾಂಗ್ರೆಸ್‌ನ ಸದಸ್ಯ ಪೀಟರ್‌ಅಂತೋಣಿ ಎಂಬ ಡಿ.ಸಿ.ಸಿ. (ಕಾಂಗ್ರೈ) ಮೆಂಬರ್ ಮಹಾಶಯನನ್ನು ಇದುವರೆಗೂ ಬಂಧಿಸಿಲ್ಲ.

28-3-82ರಂದು ಸ್ಥಳೀಯ ಡಿ. ವೈ. ಎಫ್. ಐ. ನೇತೃತ್ವದಲ್ಲಿ ನೊಂದ ಹರಿಜನರ ಮೆರವಣಿಗೆಯನ್ನುಸಿದ್ದಾಪುರ ಮಾರ್ಕೆಟ್‌ನಲ್ಲಿ ಹೊರಡಿಸಲಾಗಿತ್ತು. ಪೋಲೀಸರ ಪಕ್ಷಪಾತ ಧೋರಣೆಯನ್ನು ಪ್ರತಿಭಟಿಸಿ ತಪ್ಪಿತಸ್ಥ ಅಂತೋಣಿಯನ್ನು ಬಂಧಿಸುವಂತೆ ಒತ್ತಾಯಿಸಿ ಸ್ಥಳೀಯ ಪೋಲೀಸ್ ಠಾಣೆ ಎದುರು ಧರಣಿ ಸತ್ಯಾಗ್ರಹ ನಡೆಸಲಾಯಿತು,

ಧರಣಿ ಸತ್ಯಾಗ್ರಹ ನಡೆಯುತ್ತಿದ್ದ ಸಮಯದಲ್ಲಿ ಆಗಮಿಸಿದ ಮಡಿಕೇರಿಯ ಸರ್ಕಲ್ ಇನ್‌ಸ್ಪೆಕ್ಟರ್ ವಿನ್ಸೆಂಟ್ ಎಂಬುವವರು ಧರಣಿ ಸತ್ಯಾಗ್ರಹ, ಮೆರವಣಿಗೆಯ ನೇತೃತ್ವ ವಹಿಸಿದ್ದ ಡಿ.ವೈ.ಎಫ್.ಐ. ಕಾರ್ಯಕರ್ತರನ್ನು, ಅಧ್ಯಕ್ಷ ಕಾಂ| ಕುಟ್ಟಪನ್ ಇವರನ್ನು ಹೀನಾಯಮಾನವಾಗಿ ನಿಂದಿಸಿ ಲಾಠಿ ಚಾರ್ಜಿಗೆ ಕಾರಣರಾಗಿದ್ದಾರೆ.

ಹರಿಜನ ಗುಡಿಸಲಿಗೆ ಬೆಂಕಿ ಹಚ್ಚಿರುವ ಪೀಟರ್‌ಅಂತೋಣಿಯನ್ನು ಬಂಧಿಸುವಂತೆಯೂ, ಪಕ್ಷಪಾತದಿಂದ ವರ್ತಿಸಿರುವ ಸರ್ಕಲ್‌ಇನ್‌ಸ್ಪೆಕ್ಟರ್ ವಿನ್ಸೆಂಟನ ಮೇಲೆ ಕ್ರಮಕೈಗೊಳ್ಳುವಂತೆಯೂ ಡಿ. ವೈ. ಎಫ್. ಐ. ನ ಸಿದ್ದಾಪುರ ಸಮಿತಿ ಒತ್ತಾಯಿಸಿದೆ.

ಆರ್ಥಿಕ ಸಮೀಕ್ಷೆ:

— ಆರ್. ಚಂದ್ರ

ಕರ್ನಾಟಕ ಮುಂಗಡ ಪತ್ರ ಇನ್ನಷ್ಟು ತೆರಿಗೆ ಭಾರ

ಈಗ ರಾಜ್ಯ ಸರಕಾರದ ವರದಿ ತಾ|| 17-3-82 ರಂದು ಅರ್ಥ ಮಂತ್ರಿ ವೀರಪ್ಪ ಮೊಯ್ಲಿಯವರು ಮಂಡಿಸಿದ ರಾಜ್ಯದ 1982–83ರ ಮುಂಗಡ ಪತ್ರದಲ್ಲಿ ಒಟ್ಟು ರೂ. 1604-64 ಕೋಟಿ ವಿವಿಧ ಮೂಲಗಳಿಂದ ಆದಾಯ ತೋರಿಸಿದ್ದು, ರೂ. 1705-41 ಕೋಟಿಯಷ್ಟು ವಿವಿಧೋದ್ದೇಶಗಳಿಗೆ ವೆಚ್ಚ ತೋರಿಸಲಾಗಿದ್ದು, ರೂ. 100-77 ಕೋಟಿಯಷ್ಟು ಕೊರತೆತೋರಿಸಲಾಗಿದೆ. ಈ ಕೊರತೆಯನ್ನು ತುಂಬಲು ರೂ.25 ಕೋಟಿಯಷ್ಟು ಹೊಸ ಕರಭಾರವನ್ನು ಹೇರಲಾಗಿದೆ. ಅಷ್ಟಲ್ಲದೆ, ರಾಜ್ಯ ಸರಕಾರಿ ನೌಕರರಿಗೆ ಈ ತನಕ ಸಿಗಬೇಕಾದ ರೂ. 11 ಕೋಟಿ ತುಟ್ಟಿ ಭತ್ತೆಯನ್ನು ತಡೆಹಿಡಿಯಲಾಗಿದೆ. ಇನ್ನೂ ರೂ. 65 ಕೋಟಿಯಷ್ಟು ಕೊರತೆ ಉಳಿದಿದೆ. ಮುಂದೆ ಇನ್ನಷ್ಟು ತೆರಿಗೆಗಳನ್ನು ಹೇರುವ ಮೂಲಕ ಅವಶ್ಯಕ ವಸ್ತುಗಳ ಹಾಗೂ ಸೇವೆಗಳ ದರಗಳನ್ನು ಏರಿಸುವ ಮೂಲಕ ಈ ಕೊರತೆಯನ್ನು ತುಂಬಲು ಯೋಜಿಸಲಾಗಿದೆ.

ಬಡವರ ಬೆನ್ನುಮೂಳೆ ಮುರಿಯುವಷ್ಟು ಕರಭಾರವಿರುವ ಕೇಂದ್ರ ಸರಕಾರದ 1982-83ರ ಮುಂಗಡ ಪತ್ರದ ಬೆನ್ನತ್ತಿ ರಾಜ್ಯ ಸರಕಾರದ ಈ ಮುಂಗಡ ಪತ್ರ ಬಂದಿರುವುದು ಘಾಯಕ್ಕೆ ಬರೆಯಿಟ್ಟಂತಾಗಿದೆ ! ಈಗಾಗಲೇ ರೈಲ್ವೆ ಸಾರಿಗೆ - ಸಂಚಾರ ದರಗಳು, ಅಂಚೆ - ತಂತಿ ಸೇವಾದರಗಳು, ಪೆಟ್ರೋಲಿಯಂ, ಸಿಮೆಂಟ್, ಬಟ್ಟೆ, ಕಲ್ಲಿದ್ದಲು, ಉಕ್ಕು, ಕಬ್ಬಿಣ, ರಸ ಗೊಬ್ಬರ, ಮುಂತಾದವುಗಳ ಬೆಲೆಗಳು ವಿಪರೀತ ಏರಿವೆ. ರಾಜ್ಯ ಸರಕಾರಗಳೂ ರಸ್ತೆ ಸಾರಿಗೆ, ವಿದ್ಯುತ್, ನೀರಾವರಿ, ಇತ್ಯಾದಿ ಅವಶ್ಯಕ ಸೇವಾ ಸೌಲಭ್ಯಗಳ ದರಗಳನ್ನ ಗಣನೀಯವಾಗಿ ಏರಿಸಿವೆ. ಬೆಲೆ ಏರಿಕೆ, ಹಣದುಬ್ಬರಗಳಿಂದಾಗಿ ರೂಪಾಯಿಯ ಬೆಲೆ 20 ಪೈಸೆಗಳಿಗಿಂತಲೂ ಕಡಿಮೆಯಾಗಿದೆ. ಜನ ಸಾಮಾನ್ಯರ ಗ್ರಾಹಕ ಶಕ್ತಿಯು ಕುಸಿಯುತ್ತಿದ್ದು ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿರುವ ಜನಸಂಖ್ಯೆಯು ಹೆಚ್ಚುತ್ತಿದೆ. ಹೀಗಿರುತ್ತಾ, ಕರ್ನಾಟಕ ರಾಜ್ಯ ಸರಕಾರವು ಈ ವರ್ಷ ಇನ್ನಷ್ಟು ಕರಭಾರ ಹೇರಿ ಜನಜೀವನದ ಮಟ್ಟವನ್ನು ಮತ್ತಷ್ಟು ಹದಗೆಡಿಸಲಿದೆ.

ಈ ವರ್ಷದಷ್ಟು ತೆರಿಗೆಯ ಭಾರ ಕರ್ನಾಟಕದ ಚರಿತ್ರೆಯಲ್ಲಿಯೇ ಈ ತನಕ ಹೇರಿರಲಿಲ್ಲ. ಮೊಯ್ಲಿಯವರು ಪ್ರಸ್ತಾಪಿಸಿದ ತೆರಿಗೆಗಳ ಏರಿಕೆಗಳಿಂದ ಲಭಿಸುವ ವರಮಾನಗಳ ವಿವರ ಹೀಗಿದೆ.

ಮಾರಾಟ ತೆರಿಗೆ	ರೂ. 5.60 ಕೋಟಿ
ಪ್ರವೇಶ ತೆರಿಗೆ	ರೂ. 7.00 ,,
ಮನೋರಂಜನಾ ತೆರಿಗೆ	ರೂ. 2.00 ,,
ಸ್ಟೇಜ್ ಕ್ಯಾರೇಜ್‌ಗಳಿಗೆ ಪ್ರಯಾಣಿಕ ತೆರಿಗೆ	ರೂ. 2.00 ,,
ವೃತ್ತಿ ತೆರಿಗೆ	ರೂ. 1.00 ,,
ಅಬಕಾರಿ ಸುಂಕ	ರೂ. 1.35 ,,
ಸೇತುವೆಗಳ ಮೇಲೆ ಸುಂಕ	ರೂ. 1.00 ,,
ಅಂಗಡಿ, ವಾಣಿಜ್ಯ ಸಂಸ್ಥೆ ಶಾಸನ, ಕಾರ್ಖಾನೆ ಬ್ವಾಯಲರ್ ಶಾಸನ- ದನ್ವಯ	ರೂ. 1.00 ಕೋಟಿ
ಕೋರ್ಟ್ ಫೀ	ರೂ. 0.05 ,,

ಹೆಚ್ಚುವರಿ ಕಂದಾಯ ಸಂಗ್ರಹಕ್ಕಾಗಿ ಮಾರಾಟ ತೆರಿಗೆ ಮತ್ತು ಪ್ರವೇಶ ತೆರಿಗೆಗಳನ್ನು ಅವಲಂಬಿಸಲಾಗಿದ್ದು, ಈ ಎರಡು ಮೂಲಗಳಿಂದಲೇ ರೂ. 12.60 ಕೋಟಿ ಸಂಗ್ರಹಿಸಲಾಗುವುದು. ಹೊಸ ತೆರಿಗೆಗಳಿಂದ ಲಘು ಪಾನೀಯ, ಹತ್ತಿ ಬಟ್ಟೆ, ಸಿನೇಮಾ, ಸಕ್ಕರೆ, ತಂಬಾಕು ಸಾಮಾಗ್ರಿ, ವಿದ್ಯುತ್ ಉಪಕರಣ, ಇತ್ಯಾದಿ ಬೆಲೆಗಳು ವಿಪರೀತ ಏರಲಿವೆ.

ರಾಜ್ಯಾದ್ಯಂತ ನಗರಸಭೆಗಳು ವಿಧಿಸುತ್ತಿದ್ದ ಪ್ರವೇಶ ತೆರಿಗೆ (ಅಕ್ಟ್ರಾಯ್) ಯನ್ನು ರದ್ದುಗೊಳಿಸಬೇಕೆಂದು ಒಂದು ಕಾಲದಲ್ಲಿ ಪ್ರತಿವಾದಿಸುತ್ತಿದ್ದ ರಾಜ್ಯ ಸರಕಾರವು ಇಂದು ತಾನೇ ಪ್ರವೇಶ ತೆರಿಗೆಯ ಮೂಲಕ ವರ್ಷಕ್ಕೆ ರೂ. 7-00 ಕೋಟಿ ಗಿಟ್ಟಿಸಲು ನಿರ್ಧರಿಸಿದೆ. ಇದರಿಂದಾಗಿ, ಕಲ್ಲಿದ್ದಲು, ಕಬ್ಬಿಣ, ಉಕ್ಕು, ಸಿಮೆಂಟ್, ಕಾಗದ, ಕಾಗದದ ಉತ್ಪನ್ನಗಳು, ಉದ್ಯಮ ಯಂತ್ರಗಳು, ಕೈಗಾರಿಕಾ ಅನಿಲ, ಅಲ್ಯುಮಿನಿಯಂ ಗಟ್ಟಿಗಳು, ಕೋಕ್, ಚರ್ಮ, ತೊಗಲು, ಕೃತಕ ಗೊಬ್ಬರ ತಯಾರಿಕೆಯಲ್ಲಿ ಬಳಸುವ ಎಲ್ಲಾ ತರಹ ಪೆಟ್ರೋಲಿಯಂ ವಸ್ತುಗಳು(ಸೀಮೆಎಣ್ಣೆ ಮತ್ತು ನಾಫ್ತಾ ಹೊರತು), ರೆಫ್ರಿಜಿರೇಟರ್‌ಗಳು, ಏರ್ ಕಂಡೀಶನರ್‌ಗಳು, ಪ್ರಯಾಣಿಕರ ಬಸ್ ಹೊರತಾದ ಎಲ್ಲಾ ಆಟೋಮೋಬೈಲ್‌ಗಳು, ಟ್ರಾಕ್ಟರ್, ಪವರ್ ಟಿಲ್ಲರ್, ಅದುರುಗಳು, ಸೆಣಬು, ಇತ್ಯಾದಿಗಳ ಅಂತಿಮ ಬೆಲೆಗಳು ಹೆಚ್ಚುವುವು. ಸಣ್ಣ ಕೈಗಾರಿಕೋದ್ಯಮಿಗಳಿಗೂ, ವ್ಯವಸಾಯಗಾರರಿಗೂ, ನಗರವಾಸಿಗಳಿಗೂ ಈ ಕರಭಾರವು ಹೆಚ್ಚಾಗಿ ಬೀಳುವುದು. ಈ ಸಾಮುಗ್ರಿಗಳ ಮೇಲೆ ಒಟ್ಟು ರೂ 4 ಕೋಟಿ ಪ್ರವೇಶ ತೆರಿಗೆ ಹೇರಲಾಗುವುದು. ಸಕ್ಕರೆ ಮತ್ತು ತಂಬಾಕು ಸಾಮುಗ್ರಿಗಳ ಮೇಲಿನ ಹೆಚ್ಚಿನ ಪ್ರವೇಶ ತೆರಿಗೆಗಳಿಂದಲೇ ರೂ. 3 ಕೋಟಿ ಸಂಗ್ರಹಿಸಲಾಗುವುದು.

ಸೇತುವೆಗಳ ಮೇಲಿನ ತೆರಿಗೆಯು ರಷ್ಯಾದ ಝಾರನ ಅಮಾನುಶ ತೆರಿಗೆ ವ್ಯವಸ್ಥೆಯನ್ನೂ ನಾಚಿಸುವುದು !

ಈ ಮಧ್ಯೆ ರಾಜ್ಯ ಸರಕಾರಿ ನೌಕರರಿಗೆ ನಾಲ್ಕು ಕಂತಿನ ತುಟ್ಟಿಭತ್ತೆಯನ್ನು ಬಿಡುಗಡೆ ಮಾಡುವುದಾಗಿ ಘೋಷಿಸಿದರೂ, ಹಿಂದಿನ ಕಂತುಗಳನ್ನು ರೂ. 11 ಕೋಟಿಯಷ್ಟು ತಡೆಹಿಡಿಯುವುದನ್ನು ನೋಡಿದರೆ, ಮುಂಗಡ ಪತ್ರದಲ್ಲಿ ರೂ. 65 ಕೋಟಿ ಕೊರತೆ ಇನ್ನೂ ಉಳಿದಿರುವುದನ್ನು ನೋಡಿದರೆ, ಇನ್ನು ಮುಂದೆ ಬೆಲೆ ಏರಿಕೆಗೆ ಅನುಗುಣವಾಗಿ ಸರಕಾರಿ ನೌಕರರಿಗೆ ತುಟ್ಟಿಭತ್ತೆ ಬಿಡುಗಡೆಯಾಗುವುದೆಂಬ ಭರವಸೆ ಇಲ್ಲ. ನೌಕರರಿಗೆ ಬಡ್ತಿ, ಕನಿಷ್ಟ ವೇತನ ಇತ್ಯಾದಿಗಳೂ ಘೋಷಣೆಗಳಾಗಿಯೇ ಉಳಿದಾವು. ಈ ಘೋಷಣೆಗಳೊಂದಿಗೆ ಕೆಲವು ವಸ್ತುಗಳ ಮೇಲಿನ ತೆರಿಗೆ ರಿಯಾಯ್ತಿಯನ್ನೂ 'ಗೃಹ ಕಲ್ಯಾಣ' 'ನೇಗಿಲುಭಾಗ್ಯ' 'ಮುನ್ನಡೆ ಯೋಜನೆ' 'ಸಾಗರ ದೀಪ' ಇತ್ಯಾದಿ ಆಕರ್ಷಕ ಹೆಸರಿನ ಕೆಲವು ಕಲ್ಯಾಣ ಯೋಜನೆಗಳನ್ನು ಸದ್ಯದಲ್ಲಿಯೇ ಸಂಭವಿಸಲಿರುವ ವಿಧಾನ ಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡೇ ಘೋಷಿಸಿರುವುದು. ಕಾಂಗ್ರೆಸ್ ಆಡಳಿತದಲ್ಲಿ ಆಶ್ವಾಸನೆಗಳಿಗೂ ಆಚರಣೆಗಳಿಗೂ ಅಘಾದ ಅಂತರವಿರುವುದು ಎಲ್ಲರಿಗೂ ತಿಳಿದೇ ಇದೆ.

ಒಂದೇ ಒಂದು ಉದಾಹರಣೆಯನ್ನು ನೋಡುವಾ. ರೂ.250 ಕ್ಕಿಂತ ಕಡಿಮೆ ವೆಚ್ಚದ ಮಂಗಳಸೂತ್ರಗಳಿಗೆ ಮಾರಾಟ ತೆರಿಗೆ ವಿನಾಯಿತಿ ಘೋಷಿಸಲಾಗಿದೆ. ಚಿನ್ನದ ಬೆಲೆ ಒಂದು ಪವನಿಗೆ (ಸವರನ್) ರೂ. 1200 ಕ್ಕಿಂತಲೂ ಹೆಚ್ಚು ಇರುವಾಗ ರೂ. 250 ಕ್ಕಿಂತ ಕಡಿಮೆ ಬೆಲೆಯಿರುವ ಮಂಗಳ ಸೂತ್ರಗಳನ್ನು ಹೇಗೆ ಮಾಡಿಸಬೇಕು ? ಇದನ್ನು ರಿಯಾಯಿತಿ ಎಂದು ಪರಿಗಣಿಸಲಾಗುವುದೇ ? ಈ ಘೋಷಿತ ರಿಯಾಯಿತಿ ನಿಜವಾದ ಬಡಗ್ರಾಹಕರಿಗೆ ಸಿಗುವುದೆಂಬ ಭರವಸೆ ಇದೆಯೇ ? ಇಲ್ಲ. ಹಾಗೆಯೇ, ಸೀಮೆ ಎಣ್ಣೆ, ಔಷಧಿ ಸಾಮುಗ್ರಿಗಳು ಮತ್ತು ಔಷಧಿಗಳು, ಕೆಲವು ಧಾನ್ಯಗಳು, ಇವುಗಳ ಮೇಲಿನ ಹೆಚ್ಚುವರಿ ತೆರಿಗೆಯನ್ನು (Surcharge) ರದ್ದು ಮಾಡಲಾಗಿದೆ ಎಂದು ರಾಜ್ಯ ಮುಂಗಡ ಪತ್ರದಲ್ಲಿ ತಿಳಿಸಲಾಗಿದೆ. ಈ ಸಣ್ಣ ಪುಟ್ಟ ರಿಯಾಯಿತಿಗಳೂ ನಿಜವಾದ ಬಡಗ್ರಾಹಕರಿಗೆ ದೊರೆಯುವುದಿಲ್ಲ. ಇಂತಹ ಜೀವನಾವಶ್ಯಕ ವಸ್ತುಗಳನ್ನು ತೆರಿಗೆ ರಹಿತವಾಗಿ ಲಾಭಂಶ ಇಲ್ಲದೆ ಸರಕಾರವೇ ಸಾರ್ವಜನಿಕ ವಿತರಣ ವ್ಯವಸ್ಥೆಯ ಮೂಲಕ ಜನಸಾಮಾನ್ಯರಿಗೆ ವಿತರಣೆ ಮಾಡುವ ಹೊಣೆಗಾರಿಕೆ ವಹಿಸಬೇಕಿತ್ತು. ಆದರೆ, ಗುಂಡೂರಾವ್ - ಮೊಯ್ಲಿ ಸರಕಾರ ಇದಕ್ಕೆ ತಯಾರಿಲ್ಲ. ಕಾರಣ, ಅಂತಹ ಕ್ರಮ ಅವರ ರಾಜಕೀಯ ಅಧಿಕಾರದ ಭದ್ರತೆಯನ್ನು ಅಲುಗಾಡಿಸುವುದು !

ಇರಲಿ, ರೂ. 1705 ಕೋಟಿಯಷ್ಟು ರಾಜ್ಯ ಸರಕಾರದ ವಾರ್ಷಿಕ ವೆಚ್ಚ ಏತಕ್ಕಾಗಿ ವಿನಿಯೋಗವಾಗುವುದು? ರಾಜ್ಯಪಾಲರ, ಮುಖ್ಯಮಂತ್ರಿಗಳ, ಮಂತ್ರಿಗಳ, ಹಿರಿಯ ಅಧಿಕಾರಿಗಳ ಬಂಗಲೆ, ಸಿಬ್ಬಂದಿ, ಸಂಬಳ, ಸವಲತ್ತುಗಳಿಗಾಗಿ ಧಾರಾಳವಾಗಿ ಸರಕಾರದ ಬೊಕ್ಕಸದಿಂದ ಹಣ ಖರ್ಚಾಗುವುದು. ಇವರ ಪ್ರಯಾಣ ಭತ್ತೆ, ಟೆಲಿಫೋನ್, ನೀರು, ವಿದ್ಯುತ್ ಬಿಲ್ಲುಗಳೇ ಲಕ್ಷಾಂತರ ರೂಪಾಯಿಗಳಷ್ಟಾಗಿರುವುದು. ಇವರ ಹೆಲಿಕಾಪ್ಟರ್, ವಿದೇಶದಿಂದ ಆಮದು ಮಾಡಿರುವ ಮೋಟಾರು ವಾಹನಗಳು, ವಿಶೇಷ ರೈಲ್ವೆ ಕಂಪಾರ್ಟ್‌ಮೆಂಟ್, ಇತ್ಯಾದಿಗಳ ಖರ್ಚುಗಳೂ ವಿಪರೀತ. ಇವರುಗಳು ಜನತಾ ಪ್ರತಿನಿಧಿಗಳೇ, ಅದರಲ್ಲಿಯೂ ಭಾರತದ - ಕರ್ನಾಟಕದ ಬಡಜನರ ಪ್ರತಿನಿಧಿಗಳೇ ಎಂದು ಆತಂಕವಾಗಬಹುದು. ಇವರ ಖರ್ಚು ವೆಚ್ಚಗಳನ್ನೂ, ಭೋಗವಿಲಾಸಗಳನ್ನೂ ನೋಡಿದರೆ, ಸರಕಾರದ ಆದಾಯದ ಸಿಂಹಪಾಲು ಆಡಳಿತ, ಪೋಲೀಸು, ಮತ್ತಿತರ ಅನುತ್ಪಾದಿತ ವಿಷಯಗಳಿಗೇ ವಿನಿಯೋಗವಾಗುವುದು. ಆರ್ಥಿಕ ಅಭಿವೃದ್ಧಿಗೆ, ಶಿಕ್ಷಣ, ಆರೋಗ್ಯ, ವಸತಿ, ನೀರು, ಬೆಳಕು, ಇತ್ಯಾದಿಗಳಿಗೆ ವ್ಯಯವಾಗುತ್ತಿರುವುದು ಅತ್ಯಲ್ಪ. ಆರ್ಥಿಕ ಅಭಿವೃದ್ಧಿಗೆಂದು ವಿನಿಯೋಗವಾಗುತ್ತಿರುವ ಹಣ ಸವಲತ್ತುಗಳೂ ಸ್ಥಾಪಿತ ಹಿತಾಸಕ್ತಿಗಳಿಗೇ - ದೊಡ್ಡ ಬಂಡವಾಳಗಾರರಿಗೆ ಮತ್ತು ಭೂ ಮಾಲಿಕರಿಗೆ, ಶ್ರೀಮಂತ ರೈತರಿಗೆ ದೊರೆಯುವುವು. ಬಡ ರೈತರಿಗೆ, ಕೃಷಿ ಕಾರ್ಮಿಕರಿಗೆ, ನೌಕರರಿಗೆ, ಸಣ್ಣ ಉದ್ಯಮಿಗಳಿಗೆ, ಜನ ಸಾಮಾನ್ಯರಿಗೆ ಸರಕಾರದ ಯಾವ ಯೋಜನೆಗಳೂ, ವೆಚ್ಚಗಳೂ ಹೆಚ್ಚಿನ ಪ್ರಯೋಜನ ಕೊಡುತ್ತಿಲ್ಲ. ಜನ ಸಾಮಾನ್ಯರ, ಬಡವರ, ದುಡಿಯುವ ವರ್ಗದ ಜೀವನ ಮಟ್ಟವು ಹದಗೆಡುತ್ತಲೇ ಇದೆ. ನಿರುದ್ಯೋಗ, ಅಸಮಾನತೆ ಅನಕ್ಷರತೆ, ಅನಾರೋಗ್ಯ, ಬಡತನ ಅವರಲ್ಲಿ ಹೆಚ್ಚುತ್ತಲೇ ಇದೆ. ಅವರ ಸಂಘಟಿತ ಹೋರಾಟಗಳನ್ನು ಕರಾಳ ಶಾಸನಗಳಿಂದಲೂ, ಆಡಳಿತ ಪೋಲೀಸು ಯಂತ್ರಗಳಿಂದಲೂ ದಮನಿಸಲಾಗುತ್ತಿದೆ. ಜನಸಾಮಾನ್ಯರನ್ನು ಘೋಷಣೆಗಳಿಂದ, ಆಶ್ವಾಸನೆಗಳಿಂದ, ಹಣದಾಸೆಯಿಂದ ಮರಳು ಮಾಡಿ ಚುನಾವಣೆಯಲ್ಲಿ ತಾವು ಗೆದ್ದು ಬರಲು ಅನುಕೂಲವಾಗುವಂತೆ ವ್ಯಾಪಕ ಭ್ರಷ್ಟಾಚಾರಕ್ಕೆ ಆಳುವ ಪಕ್ಷದ ಪುಢಾರಿಗಳು ರಾಜ್ಯಾದ್ಯಂತ ಎಡೆ ಮಾಡಿಕೊಡುವರು. ರಾಜ್ಯದ ಸಿಮೆಂಟ್ ಹಗರಣ ಇದಕ್ಕೆ ಹೊಸ ಸಾಕ್ಷಿ.

ರಾಜ್ಯ ಸರಕಾರದ ವೆಚ್ಚದ ಭಾರವು ಜನಸಾಮಾನ್ಯರ ಮೇಲೆಯೇ ಬೀಳುವುದು. ಆಸ್ತಿವಂತರ, ಹಣವಂತರ ಮೇಲೆ ಬೀಳುವ ಕರಭಾರವು ಅತ್ಯಲ್ಪವಾಗಿರುವುದು. ಹಣದುಬ್ಬರ, ಬೆಲೆ ಏರಿಕೆ, ಆರ್ಥಿಕ ಅಭಿವೃದ್ಧಿಯ ವೆಚ್ಚಗಳಿಂದ ಈ ವರ್ಗದವರ ಆಸ್ತಿ, ಆದಾಯ ಹೆಚ್ಚುತ್ತಲೇ ಇರುವುದಾದರೂ, ಅವುಗಳ ಮೇಲೆ ನ್ಯಾಯಯುತವಾದ ತೆರಿಗೆ ಹೇರಲಾಗುತ್ತಿಲ್ಲ. ಬಂಡವಾಳಶಾಹಿ ಆರ್ಥಿಕ ಮಾರ್ಗದಲ್ಲಿ, ಸರಕಾರದ ವೆಚ್ಚಗಳಿಗೆ ಅಪ್ರತ್ಯಕ್ಷ ತೆರಿಗೆ, ಸಾರ್ವಜನಿಕ ಸಾಲ, ಕಾರ್ಮಿಕರ ಮತ್ತು ನೌಕರರ ವೇತನ ಸ್ತಂಭನ, ಕೊರತೆ ಹಣ ಸೃಷ್ಟಿ ಇವುಗಳನ್ನೆ ಹೆಚ್ಚಾಗಿ ಅವಲಂಬಿಸಲಾಗುವುದು. ಆದರೆ ಸರಕಾರದ ವೆಚ್ಚಗಳಲ್ಲಿ ಆಸ್ತಿವಂತರಿಗೇ, ಶ್ರೀಮಂತರಿಗೇ ಹೆಚ್ಚಿನ ಅನುಕೂಲವಾಗುವುದು. ಪರಿಣಾಮವಾಗಿ, ಬಡಜನರು, ದುಡಿಯುವ ಜನರು ಸರಕಾರದ ವೆಚ್ಚಕ್ಕೆ ಹಣ ಸಂಗ್ರಹಿಸುವಾಗಲೂ, ಸರಕಾರ ಆಡಳಿತ ಅಭಿವೃದ್ಧಿಗಳಿಗೆ ಖರ್ಚು ಮಾಡುವಾಗಲೂ ಇಬ್ಬಗೆಯಲ್ಲಿ ಶೋಷಿಸಲ್ಪಡುವರು. ಎರಡೂ ಕಡೆಗಳಲ್ಲಿ ಬಡವರಿಂದ ಶ್ರೀಮಂತರಿಗೇ ಸಂಪತ್ತು ಆದಾಯ ಹರಿದು ಹೋಗುವುದು. ಈ ನಗ್ನ ಸತ್ಯವನ್ನು ಬಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಜನರಿಗೆ ತಿಳಿಯಪಡಿಸಿ ಬದಲಾವಣೆಯ ದಾರಿಯತ್ತ ಅವರನ್ನು ಚುರುಕುಗೊಳಿಸಬೇಕಾಗಿದೆ. ●

ಶಿವಮೊಗ್ಗ :

ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ ಹೋರಾಟ ಸಂಘಟಿಸಲು ತೀರ್ಮಾನ

ಅಗತ್ಯ ವಸ್ತುಗಳ ಬೆಲೆ ಏರಿಕೆ, ಬಸ್ ದರ ಏರಿಕೆ, ಅಂಚೆ ಮತ್ತು ರೈಲ್ವೆ ದರ ಏರಿಕೆ ಮುಂತಾದುವುಗಳ ವಿರುದ್ಧ ಜಿಲ್ಲಾದ್ಯಂತ ಹೋರಾಟ ಸಂಘಟಿಸಬೇಕೆಂದು 28-3-82 ರಂದು ಸೇರಿದ ಸಿ. ಪಿ. ಐ. (ಎಂ) ಜಿಲ್ಲಾ ಸಮಿತಿ ತೀರ್ಮಾನಿಸಿದೆ.

ಜಿಲ್ಲಾ ಸಮಿತಿ ಸಭೆಗೆ ರಾಜ್ಯ ಸೆಕ್ರೆಟರಿಯೇಟ್ ಸದಸ್ಯ ಕಾ|| ಸಿ. ನಂಜುಂಡಪ್ಪ ಮತ್ತು ರಾಜ್ಯ ಸಮಿತಿ ಸದಸ್ಯ ಕಾ| ಅಬ್ರಹಾಂ ಕರ್ಕಡ ಆಗಮಿಸಿದ್ದರು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನ ವಿರೋಧಿ, ಕಾರ್ಮಿಕ ವಿರೋಧಿ ಮತ್ತು ರೈತ ವಿರೋಧಿ ನೀತಿಯ ವಿರುದ್ಧ ಅವಿರತ ಹೋರಾಡುತ್ತಿರುವ ಪಕ್ಷಕ್ಕೆ ನಿಧಿ ಸಂಗ್ರಹ ಕಾರ್ಯವನ್ನು ತೀವ್ರಗೊಳಿಸಲು ತೀರ್ಮಾನಿಸಲಾಯಿತು.

1982ರ ಮೇ ತಿಂಗಳಿನಲ್ಲಿ ಜಿಲ್ಲಾ ಮಟ್ಟದ ಪಾರ್ಟಿ ಶಿಕ್ಷಣ ಶಿಬಿರ ನಡೆಸಲು ತೀರ್ಮಾನಿಸಿತು.

ಸಿ. ಪಿ. ಐ.ನ ಅಪಪ್ರಲಾಪ

[3ನೇ ಪುಟದಿಂದ]

ಗಳು ಸಿಪಿಐನೊಂದಿಗೆ ಭಾಗವಹಿಸುತ್ತಿವೆಯೆ ಎಂಬುದನ್ನ ಸಿನ್ಹಾರವರಿಂದ ನಾವು ತಿಳಿಯಬಹುದೇ ? ಈ ಬಗ್ಗೆ ಯಾವುದಾದರು ಯೋಜನೆಯನ್ನು ಅವರು ಮತ್ತು ಅವರ ಪಕ್ಷ ವೇನಾದರೂ ಯೋಚಿಸಿದೆಯೆ ಎಂಬುದನ್ನು ನಾವು ತಿಳಿಯಬಹುದೆ ?

'ಅಂತರರಾಷ್ಟ್ರೀಯ ಕಮ್ಯುನಿಸ್ಟ ಚಳುವಳಿಯ ಮುಖ್ಯ ಪ್ರವಾಹ' ಅಂದರೇನು ಮತ್ತು ಅದರಲ್ಲಿ ಸೇರಲು ನಿಗದಿ ಪಡಿಸಿರುವ ನಿಯಮಗಳೇನೆಂಬುದನ್ನು ಅವರಿಂದ ತಿಳಿಯಬಹುದೆ ?

ಕುತ್ಸಿತ ಅಪಪ್ರಚಾರ

ಬಿಜೆಪಿ ಕುರಿತಂತೆ ಸಿಪಿಐ (ಎಂ) ನ ನಿಲುವಿನ ವಿರುದ್ಧ ಅಪಪ್ರಚಾರ ಮಾಡಲಾಗುತ್ತದೆ. ಈ ಬಗ್ಗೆ ಬಹಳ ಹಿಂದೆಯೇ ತನ್ನ ನಿಲುವನ್ನು ಸಿಪಿಐ(ಎಂ) ನಿಚ್ಚಳಗೊಳಿಸಿವೆ. ಬಿಜೆಪಿ ಬೂರ್ಜ್ವಾ ಜಮೀನ್ದಾರರ ಪಕ್ಷವಾಗಿದ್ದು, ಹಿಂದೂ ಜಾತಿವಾದ ಮತಾಂಧರನ್ನು ಓಲೈಸುತ್ತದೆ. ಅದರ ಸೋವಿಯತ್ ವಿರೋಧಿ ನಿಲುವನ್ನು ತಿಳಿಸಿದ್ದೇವೆ. ಆದರೆ ತುರ್ತುಪರಿಸ್ಥಿಯ ಅನುಭವದ ನಂತರ ಕಾಂಗ್ರೆಸ್ ಎಡ ಪಕ್ಷದ ಆಳ್ವಿಕೆಯಿಂದ ಬಿಜೆಪಿ ಭೀತಿಗೊಂಡಿದೆ.NSA

1960 ರಿಂದ 1967ರ ವರೆಗೆ ಬೂರ್ಜ್ವಾ ವಿರೋಧ ಪಕ್ಷಗಳನ್ನು ತೀವ್ರ ಬಲ ಪಂಥೀಯರೆಂದು ಧಿಕ್ಕರಿಸಿದ್ದು ಸಮಂಜಸವಾಗಿತ್ತು. ಮತ್ತು 1967–69 ರಲ್ಲಿ ಇದೇ ಪಕ್ಷಗಳೊಂದಿಗೆ ಸರ್ಕಾರ ರಚಿಸುವುದು ಮಾರ್ಕ್ಸ್‌ವಾದಿ – ಲೆನಿನ್‌ವಾದಿಯಾಗಿತ್ತು. ಅವುಗಳನ್ನು ಪುನಃ ಪ್ರತೀಗಾಮಿ ಫ್ಯಾಸಿಸ್ಟ್ ಎಂದು ಜರಿದು 1969-79 ರಲ್ಲಿ ಕಾಂಗ್ರೆಸ್ ನೊಡನೆ ಮಾಡಿದ ಸಹಯೋಗ ಸಮಂಜಸವಲ್ಲದೇ ಮಾರ್ಕ್ಸ್‌ವಾದಿಯೂ ಆಗಿತ್ತು !

ಸಹಾಯಕ್ಕೆ ಬಾರದ ಮಾತುಗಳು

ಅಂತರರಾಷ್ಟ್ರೀಯ ಕಮ್ಯುನಿಸ್ಟ ಚಳುವಳಿಯಲ್ಲಿ ಗಂಭೀರ ಬಿನ್ನಾಭಿಪ್ರಾಯಗಳಿರುವಾಗ ಇಂತಹ ಅಬ್ಬರದ ಮಾತುಗಳಿಂದ ಯಾವುದೇ ಅರ್ಥಪೂರ್ಣ ಸಂವಾದವನ್ನು ನಡೆಸಲಾಗುವುದಿಲ್ಲ. ಎಡ ಮತ್ತು ಪ್ರಜಾಪ್ರಭುತ್ವ ಪರ್ಯಾಯ ರೂಪಿಸಬೇಕಾಗಿರುವ ಈ ಸಮಯದಲ್ಲಿ ಇಂತಹ ಮಾತುಗಳು ಸಹಾಯಕವಾಗಿಲ್ಲ.

ನಾವು ಎತ್ತಿರುವ ಅಂಶಗಳನ್ನು ಸಿನ್ಹಾರವರು ಸರಿಯಾಗಿ ಉದ್ಧರಿಸಿದ್ದಾರೆ.''ಚೀನಾ ಕುರಿತ ಮತ್ತುಅಧಿಕಾರಿಶಾಹಿ ವಿರೋಧಿ ಭೂಮಿಕೆ ರೂಪಿಸುವುದನ್ನು ಕುರಿತಂತೆ ಭಿನ್ನಾಭಿಪ್ರಾಯಗಳು ತೋರಿಕೆಗೆ ಗಮನಾರ್ಹವಲ್ಲವೆಂದು ಕಂಡರೂ ವಾಸ್ತವದಲ್ಲಿ ಬಹಳ ಮುಖ್ಯವಾದ್ದಾಗಿವೆ. ಮುಂಬರುವ ಸಂಧಿಗ್ದ ಸಮಯದಲ್ಲಿ ದೇಶದ ಎಡ ಶಕ್ತಿಗಳು ತನ್ನ ಐತಿಹಾಸಿಕ ಪಾತ್ರ ನಿರ್ವಹಿಸುಂತ ಸಿಪಿಐ ನ ಕಾಂಗ್ರೆಸ್ ಈ ಆತಂಕಗಳಿಗೊಂದು ಪರಿಹಾರ ರೂಪಿಸಬೇಕಾಗಿದೆ'' ಈ ಬಗ್ಗೆ ಸಿಪಿಐ ನಾಯಕರುಗಳು ತಮ್ಮ ಬುದ್ದಿ ಮತ್ತೆಯ ಕೊನೆಯ ಮಾತುಗಳನ್ನು ಹೇಳಿದ್ದೇವೆಂದು ಸಾರಬಹುದು. ಆದರೆ ಸಿಪಿಐ(ಎಂ)ನ ರಾಜಕೀಯ ಸೈದ್ಧಾಂತಿಕ ವಿಚಾರ ಸರಣಿಯ ವಿರುದ್ಧ ನಿರಂತರ ಅವಾಚ್ಯ ಧಾಳಿ ಮಾಡಬೇಕಾಗಿಲ್ಲ.

ESMA ಇವುಗಳ ವಿರುದ್ಧ ವಿರೋಧ ಪಕ್ಷಗಳೊಂದಿಗೆ ಕೈಜೋಡಿಸುತ್ತಿದೆ.

ಅಧಿಕಾರಷಾಹಿ ವಿರೋಧಿ ಹೋರಾಟದಲ್ಲಿ ಬಿಜೆಪಿಯ ಬೆಂಬಲವನ್ನು ಎನಕೇನ ಕೈಬಿಡುವಂತಿಲ್ಲ. ಬಿ ಜೆ ಪಿ ಯನ್ನು ಆಹ್ವಾನಿಸಲು ಸಿ ಪಿ ಐ (ಎಂ) ಸ್ವತಃ ಮುಂದಾಗದಿದ್ದರೂ ಬೇರೆ ಪಕ್ಷಗಳು ಅದರ ಬೆಂಬಲವನ್ನು ಒತ್ತಾಯಿಸಿದಾಗ ಸಿಪಿಐ (ಯಂ) ಅಡ್ಡ ಬರುವುದಿಲ್ಲ.

ಕೇವಲ ಸಂಸತ್ತಿನೊಳಗಲ್ಲ

ಸಿನ್ಹಾರವರು ಬರೆಯುತ್ತಾರೆ : "ಸಿ ಪಿ ಐ ಸಂಸತ್ತಿನೊಳಗೆ ರಾಜ್ಯ ವಿಧಾನ ಸಭೆಗಳಲ್ಲಿ ಬಿ ಜೆ ಪಿ ಯೊಂದಿಗೆ ಸಹಕರಿಸುತ್ತಿದೆ ಆದರೆ ಅಂತಹ ಸಹಕಾರ ಕೇವಲ ಸಂಸತ್ತಿಗೆ ಮಾತ್ರ ಸೀಮಿತವಾಗಿರುತ್ತದೆ, ಏಕೆಂದರೆ ಸಿಪಿಐ ರಾಜಕೀಯ ಸಂಯುಕ್ತ ರಂಗವನ್ನು ಕಾಂಗ್ರೆಸ್(ಐ) ಅಥವಾ ಬಿಜೆಪಿಯೊಂದಿಗೆ ಮಾಡಿಕೊಳ್ಳಲಾಗುವುದಿಲ್ಲ.ಆದರೆಇದು ಪೂರ್ಣ ಸತ್ಯವನ್ನು ತಿಳಿಸುವುದಿಲ್ಲ, ಬಿಜೆಪಿ ನಾಯಕತ್ವದ ಕಾರ್ಮಿಕ ಸಂಘಟನೆಯೊಂದಿಗಿರುವ ಜಂಟೀ ಹೋರಾಟ ರ್ಯಾಲಿಗಳಲ್ಲಿ ಸಿಪಿಐ ನಾಯಕತ್ವದ ಕಾರ್ಮಿಕ ಸಂಘಟನೆ ಭಾಗವಹಿಸುತ್ತಿದೆ. ಇವುಗಳನ್ನು ಬಿಜೆಪಿ ಯೊಂದಿಗಿನ ರಾಜಕೀಯ ಸಂಯುಕ್ತ ರಂಗವೆಂದು ಜನತೆ ತಿಳಿದಿಲ್ಲ. ಬಿಜೆಪಿ ಸರ್ವಾಧಿಕಾರಿ ಆಳ್ವಿಕೆ ವಿರುದ್ಧ ಧ್ವನಿ ಎತ್ತಿದರೆ ಅದನ್ನು ಬಿಜೆಪಿ ಯೊಂದಿಗಿನ ರಾಜಕೀಯ ಸಂಯುಕ್ತರಂಗವೆಂದು ಏಕೆ ಕೂಗುತ್ತಿದ್ದಿರಿ.?

ಸಿ. ಪಿ. ಐ. (ಎಂ.) ಗೆ ಗೊತ್ತಿರುವುದು ಕೇವಲ ಮಾರ್ಕ್ಸವಾದ ಮತ್ತು ಮಾರ್ಕ್ಸವಾದ-ಲೆನಿನ್‌ವಾದ, 'ಸ್ವತಂತ್ರ ಮಾರ್ಕ್ಸವಾದ' ವಾಗಲಿ ಅಥವಾ 'ಅವಲಂಬಿತ ಮಾರ್ಕ್ಸವಾದ' ಗಳಲ್ಲಾಗಲೀ ಅದಕ್ಕೆ ನಂಬಿಕೆಯಿಲ್ಲ. ಸಿ. ಪಿ ಐ (ಎಂ) ಪ್ರತಿಪಾದಿಸುವದೇನೆಂದರೆ: ಪ್ರತಿಯೊಂದು ಕಮ್ಯೂನಿಸ್ಟ್ ಪಕ್ಷವೂ ತಾನೂ ಕೆಲಸಮಾಡುವ ದೇಶದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ಸ್ವತಂತ್ರವಾಗಿ ಅಧ್ಯಯನ ಮಾಡಿ ವಿಶ್ಲೇಷಿಸಬೇಕಲ್ಲದೆ, ಬೇರೆಯವರ ಅನುಭವವನ್ನು ಅನುಸರಿಸುವುದಾಗಲಿ, ಎರವಲು ಪಡೆಯುವುದಾಗಲಿ ಮಾಡಬಾರದು. ಇದನ್ನು ಸ್ವತಂತ್ರ ಮಾರ್ಕ್ಸವಾದ ಸೋಗು ಎಂದು ಜರಿಯುವ ಮಟ್ಟಕ್ಕೆ ಏಕೆ ಇಳಿಯಬೇಕು ?

ಎಲ್ಲಹೂ ಸರಿ

ತಾನು ಮಾಡುವುದಲ್ಲೆವೂ ಸರಿ ಎಂಬ ಸೋಗು ಏಕೆ ? ಇದೇ ನಾಯಕರುಗಳು 1961 ರ ಪಾರ್ಟಿ ಕಾಂಗ್ರೆಸಿನಲ್ಲಿ ಸ್ವತಂತ್ರ, ಜನಸಂಘಗಳನ್ನು ಪ್ರತಿಗಾಮಿಗಳೆಂದು ಜರಿದದ್ದು ನಮಗೆ ಜ್ಞಾಪಕವಿದೆ. ಆದರೆ 1967 ರ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶ ಹೊರಬಿದ್ದ ಕೂಡಲೇ ಇದೇ ಪಕ್ಷಗಳೊಂದಿಗೆ ಸಂಯುಕ್ತ ಸರಕಾರ ರಚಿಸಲು ಸಿಪಿಐ ಮುಂದಾಯಿತು.

1960 ರಿಂದ 1967 ರ ವರೆಗೆ ಬೂರ್ಜ್ವಾ ವಿರೋಧ ಪಕ್ಷಗಳನ್ನು ತೀವ್ರ ಬಲಪಂಥೀಯರೆಂದು ದಿಕ್ಕರಿಸಿದ್ದು ಸಮಂಜಸವಾಗಿತ್ತು ಮತ್ತು 1967-69ರಲ್ಲಿ ಇದೇ ಪಕ್ಷಗಳೊಂದಿಗೆ ಸರ್ಕಾರ ರಚಿಸುವುದು ಮಾರ್ಕ್ಸ್‌ವಾದಿ - ಲೆನಿನ್ ವಾದಿಯಾಗಿತ್ತು. ಅವುಗಳನ್ನು ಪುನಃ ಪ್ರತೀಗಾಮಿ ಫ್ಯಾಸಿಸ್ಟ ಎಂದು ಜರಿದು 1969-79 ರಲ್ಲಿ. ಕಾಂಗ್ರೆಸ್‌ನೊಡನೆ ಮಾಡಿದ ಸಹಯೋಗ ಸಮಂಜಸವಲ್ಲದೇ ಮಾರ್ಕ್ಸ್‌ವಾದಿಯೂ ಆಗಿತ್ತು! ಮತ್ತೆ ಈಗ ಕಾಂಗ್ರೆಸ್ಸ್‌ಗೆ ಪರ್ಯಾಯವಾಗಿ ಎಡ ಮತ್ತು ಪ್ರಜಾಪ್ರಭುತ್ವ ಸರಕಾರವನ್ನು ತರುವ ಹೊಣೆಯನ್ನು ಸಿಪಿಐ ಹೊತ್ತಿದೆಯೆಂದು ಬೊಬ್ಬೆ ಹೊಡೆಯುವುದು ಸಮಂಜಸವಾಗಿದೆ.

ಇವೆಲ್ಲವೂ 'ಕ್ರಿಯಾತ್ಮಕ ಮಾರ್ಕ್ಸ್ ವಾದ' ಏಕೆಂದರೆ ಈ ಎಲ್ಲ ಸಾಹಸಗಳನ್ನು ಮಾಡಿರುವುದು ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಮುಖ್ಯ ಪ್ರವಾಹದ ಅವಿಭಾಜ್ಯ ಅವೆಂದು ಕರೆದು ಕೊಳ್ಳುವ ಸಿಪಿಐ !

ಸಿನ್ಹಾರವರು ಬರೆಯುತ್ತಾರೆ; "ಸರ್ಕಾರದ ಜನ ವಿರೋಧಿ ಹಾಗೂ ಬಲಗೊಳ್ಳುತ್ತಿರುವ ಬಲ ಪಂಥೀಯ ಅಪಾಯದ ವಿರುದ್ದದ ಜಂಟೀ ಹೋರಾಟವನ್ನು 195೫ರ ಸಿಪಿಐನ ಅಮೃತ್‌ಸರ ಕಾಂಗ್ರೆಸ್ ಹಾಕಿಕೊಟ್ಟದೆ ಮತ್ತು ಈ ಅಂಶವನ್ನು ಬಲಪಂಥೀಯ ಪಕ್ಷಗಳನ್ನು ಗಮನಿಸದೆ ಕೇವಲ ಕಾಂಗ್ರೆಸ್‌ನ ವಿರುದ್ದದ ಏಕಮುಖ ಹೋರಾಟವನ್ನು ಪ್ರತಿಪಾದಿಸುವ ಇಂದಿನ ಸಿಪಿಐ (ಎಂ) ನಾಯಕರುಗಳು ತಂದ ತಿದ್ದುಪಡಿಗಳನ್ನು ಸೋಲಿಸಿ 1961 ರ ವಿಜಯವಾಡ ಕಾಂಗ್ರೆಸ್ಸಿನಲ್ಲಿ ಪುನಃ ಅಂಗೀಕರಿಸ ಲಾಗಿದೆ. "

ವಿವರಣೆ ನೀಡಬೇಕಾಗಿದೆ

ಈ ಸರಿಯಾದ ನಿಲುವನ್ನು 1967-69ರಲ್ಲಿ ಏಕೆ ಕೈಬಿಟ್ಟು ಜನಸಂಘ ಸ್ವತಂತ್ರ ಪಕ್ಷಗಳೊಂದಿಗೆ ಕಾಂಗ್ರೆಸ್‌ನ ಜನ ವಿರೋಧಿ ನೀತಿಯ ವಿರುದ್ದ ಏಕಮುಖ ಹೋರಾಟವನ್ನು ಕೈಗೊಳ್ಳಲಾಯಿತೆಂದು ಸಿಪಿಐ ವಿವರಣೆ ನೀಡಬೇಕಾಗಿದೆ. ಜೊತೆಗೆ 1969-79 ರಲ್ಲಿ ಕಾಂಗ್ರೆಸ್ ಸಹಯೋಗದೊಡನೆ ತೀವ್ರ ಬಲ ಪತ್ರೀಗಾಮಿಗಳ ವಿರುದ್ದ ಏಕಮುಖ ಹೋರಾಟವನ್ನು ಅವರ ಪಕ್ಷ ಏಕೆ ಕೈಗೊಂಡಿತೆಂದು ವಿವರಿಸಬೇಕಾಗಿದೆ.

ಎರಡು ದಶಕಗಳಲ್ಲಿ ಸಿದ್ದವಾಗಿರುವ ದಿವಾಳಿಖೋರ ರಾಜಕೀಯ ನೀತಿಯ ನಂತರವೂ ಸಿಪಿಐ ತನ್ನನ್ನು ಸ್ವವಿಮರ್ಶೆ ಮಾಡಿಕೊಳ್ಳಲು ಒಪ್ಪಿಕೊಳ್ಳದಿರುವುದಲ್ಲದೆ ಸಿಪಿಐ (ಎಂ) ಸ್ವವಿಮರ್ಶೆ ಮಾಡಿಕೊಳ್ಳುವಂತೆ ಹೇಳುವ ದಾಷ್ಟ್ರ್ಯ ತೋರಿದೆ. ಸಿನ್ಹಾ ಬರೆಯುತ್ತಾ; "ಮಾರ್ಕ್ಸವಾದ ಲೆನಿನ್‌ವಾದಕ್ಕೆ ಬದ್ಧವಾದ ಯಾವುದೇ ಪಕ್ಷಕ್ಕೆ ಅನಿವಾರ್ಯವಾದ ಸ್ವವಿಮರ್ಶೆ ಧೋರಣೆಯನ್ನು ಅನುಸರಿಸುವುದರಿಂದ ಸಿಪಿಐ ಮತ್ತು ಸಿಪಿಐ (ಎಂ) ಗಳ ನಡುವಣ ಬಿನ್ನಾಭಿಪ್ರಾಯದ ಅಂತರವನ್ನು ಕಡಿಮೆಗೊಳಿಸುದಕ್ಕೆ ಸಹಕಾರಿಯಾಗುತ್ತದೆ" ಎಂದಿದ್ದಾರೆ.

ತಾನು ಮಾತ್ರ ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಕುಟುಂಬಕ್ಕೆ ಸೇರಿದವನೆಂದು ನಿರಂತರವಾಗಿ ಚಿತ್ರಿಸುವ ಸಿಪಿಐ, ಸಿಪಿಐ (ಎಂ) ಗೆ ಯಾಚಿಸದಿರುವ ಉಪದೇಶ ನೀಡುವ ಮೊದಲು ತನ್ನ ಸ್ವವಿಮರ್ಶೆಯ ಮೇಲ್ಪಂಕ್ತಿಯನ್ನು ಯಾವಾಗಲೂ ಮಾತನಾಡುವುದರೊಂದಿಗೇ ಸಿಪಿಐ(ಎಂ) ವಿರುದ್ಧ ಅವಾಚ್ಯಧಾಳಿ ನಡೆಸುದರ ಬದಲು ತನ್ನ ಭೂತವನ್ನು ವಿಮರ್ಶಿಸಿಕೊಂಡು ತಪ್ಪು ಸರಿಪಡಿಸಿಕೊಳ್ಳಲು ಇವತ್ತೂ ಕಾಲ ಮಿಂಚಿಲ್ಲ. ●

ಮೈಸೂರು
ಸೈಕಲ್ ಜಾಥಾ ಕಾರ್ಯಕರ್ತರಿಗೆ ಸತ್ಕಾರ

ಮಾ. 28 ರಂದು ಬೆಂಗಳೂರಿನಲ್ಲಿ ನಡೆದ ಡಿವೈಎಫ್ಐ ಕಾರ್ಯಕರ್ತರ ಮತಪ್ರದರ್ಶನದಲ್ಲಿ ಪಾಲ್ಗೊಳ್ಳಲು ಕೊಡಗಿನಿಂದ ಆಗಮಿಸುತ್ತಿದ್ದ ಸೈಕಲ್ ಜಾಥಾ ಕಾರ್ಯಕರ್ತರಿಗೆ 24-3-82 ರಂದು ಮೈಸೂರಿನ ಸಿಟಿ ಕಾರ್ಪೊರೇಷನ್ ಎಂಪ್ಲಾಯೀಸ್ ಯೂನಿಯನ್‌ನ ಆಶ್ರಯದಲ್ಲಿ ಸತ್ಕಾರ ನೀಡಲಾಯಿತು. ಮೈಸೂರಿನ ಅಶೋಕಪುರಂ ದೊಡ್ಡಕೇರಿಯ ಪೌರಕಾರ್ಮಿಕ ಸದಸ್ಯರು ಸೈಕಲ್‌ಜಾಥಾ ಕಾರ್ಯಕರ್ತರಿಗೆ ಊಟೋಪಚಾರಗಳನ್ನು ನೀಡಿದರು.

ಸಂಘದ ಮುಖಂಡರಾದ ಕಾಂ। ಎಂ. ಎಫ್. ಉಗ್ರಪ್ಪ, ಸಿ. ಕೆ. ಮೋನ್, ಚಿಕ್ಕಮಾದಯ್ಯ, ರಾಮಚಂದ್ರ ಮೊದಲಾದವರು ಮೇಲ್ವಿಚಾರಣೆವಹಿಸಿದ್ದರು. ಸೈಕಲ್ ಜಾಥಾ ತಂಡದ ಪರವಾಗಿ ಕಾಂ। ಲತೀಫ್, ಜಯಕುಮಾರ್, ಮೋಹನ್‌ಕುಮಾರ್ ಇವರುಗಳು ನೆರದಿದ್ದ ಪೌರಕಾರ್ಮಿಕರಿಗೆ ಜಾಥಾದ ಉದ್ದೇಶ ವಿವರಿಸಿದರು.

ಮೈಸೂರಿನಲ್ಲಿ
ಸಿ ಐ ಟಿ ಯು ಸಂಘಟನಾ ಸಮಿತಿ ರಚನೆ

21-3-1982 ರಂದು ಮೈಸೂರಿನಲ್ಲಿ ಸಭೆ ಸೇರಿದ್ದ ಕಾರ್ಮಿಕ ಮುಖಂಡರ ಸಭೆಯಲ್ಲಿ ಮೈಸೂರು ಜಿಲ್ಲಾ ಸಿ. ಐ. ಟಿ. ಯು. ಸಂಘಟನಾ ಸಮಿತಿಯನ್ನು ರಚಿಸಿತು. 19 ಜನ ಸದಸ್ಯರಿರುವ ಸಮಿತಿಯ ಸಂಚಾಲಕರಾಗಿ ರಾಜ್ಯ ಸಿ. ಐ. ಟಿ. ಯು. ಸಮಿತಿಯ ಸದಸ್ಯರಾದ ಕಾಂ॥ಮೋಹನ್‌ಕುಮಾರ್ ಆಯ್ಕೆಯಾದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ। ಎಂ. ಕೆ. ಭಟ್‌ರವರು ಕೂಲಿ ಹೆಚ್ಚಳಕ್ಕಾಗಿ ಕಾರ್ಮಿಕರು ಶಕ್ತಿಶಾಲಿ ಕಾರ್ಮಿಕರ ಸಂಘಟನೆಯನ್ನು ಕಟ್ಟಿ ಹೋರಾಡುವುದರೊಂದಿಗೆ ಕೂಲಿ ಪದ್ಧತಿಯೇ ಇಲ್ಲದಂತಹ ಸಮಾಜವಾದಿ ಸಮಾಜ ರಚನೆ ಮಾಡುವ ನಿಟ್ಟಿನಲ್ಲಿ ರಾಜಕೀಯವಾಗಿ ಪ್ರಜ್ಞಾವಂತರಾಗಬೇಕೆಂದು ಕರೆನೀಡಿದರು. ಕಾಂ॥ ಎಂ. ಎನ್. ಉಗ್ರಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಮೈಸೂರು ಜನತಾ ಬಜಾರ್ ಕಾರ್ಮಿಕರ ಹೊರಾಟಕ್ಕೆ ಬೆಂಬಲನೀಡುವ, ಗೋಕಾಕ್ ಸಮಿತಿಯ ವರದಿಯನ್ನು ಅಲ್ಪ ಸಂಖ್ಯಾತರ ಭಾವನೆಗಳನ್ನು ಗಮನದಲ್ಲಿರಿಸಿ ಜ್ಯಾರಿಗೊಳಿಸಲು ಒತ್ತಾಯಿಸುವ ಹಾಗೂ ಸ್ಥಳಿಯ ಸರಕಾರಿ ಮುದ್ರಾಣಾಲಯದ ಪೀಸ್‌ರೇಟ್ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡುವ ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು.

ಇಂದಿರಾ ಆಳ್ವಿಕೆಯಲ್ಲಿ

ಕೊಬ್ಬಿರುವ ಬಂಡವಾಳಗಾರರು

ದೇಶದ 20 ಹಿರಿಯ ಗುತ್ತೇದಾರಿ ಬಂಡವಾಳ ಶಾಹಿಗಳ ಸಂಪತ್ತು 1972 ರಿಂದ 1980 ರ ಅವಧಿಯೊಳಗೆ ಮುಮ್ಮಡಿಗೊಳಿಸಿವೆ. ಈ ಕೆಳಗಿನ ವಿವರ ಈ ಕುರಿತು ಸ್ಪಷ್ಟ ಚಿತ್ರಣ ನೀಡುತ್ತದೆ.

	ಗುತ್ತೇದಾರರ ಹೆಸರು	ಆಸ್ತಿ(ಕೋಟಿ ರೂ. ಗಳಲ್ಲಿ) 1972	1980
1.	ಟಾಟಾ	641.93	1538.97
2.	ಬಿರ್ಲಾ	589.42	1431.99
3.	ಮುಫತಲಾಲ್	183.74	427.54
4.	ಜೆ. ಕೆ. ಸಿಂಘಾನಿಯಾ	121.45	412.72
5.	ಥಾಪರ	136.16	348.06
6.	ಐ. ಸಿ. ಐ.	135.21	342.01
7.	ಸಾರಾಭಾಯಿ	84.44	317.94
8.	ಎ. ಸಿ. ಸಿ.	134.36	274.51
9.	ಬಾಂಗೂರ	125.26	264.33
10.	ಲಾರ್ಸನ್ ಮತ್ತು ಟುಬ್ರೊ(L&T)	79.03	246.48
11.	ಶ್ರೀ ರಾಮ್	120.77	241.00
12.	ಕಿರ್ಲೋಸ್ಕರ್	86.46	220.37
13.	ಹಿಂದೂಸ್ತಾನ್ ಲೀವರ್	77.87	219.30
14.	ಸಿಂಧಿಯಾ	107.73	212.84
15.	ಆಯಿಲ್ ಇಂಡಿಯಾ	104.04	205.88
16.	ಮೋದಿ	58.05	198.82
17.	ಟಿ ವಿ ಎಸ್ ಐಯ್ಯಂಗಾರ್	50.97	188.64
18.	ಮಹೇಂದ್ರ ಮತ್ತು ಮಹೇಂದ್ರ	58.49	186.03
19.	ಚೌಗಲೆ	57.52	184.68
20.	ಬಜಾಜ್	63.32	179.26

1981 ರ ವಿವರ ಇನ್ನೂ ಲಭ್ಯವಾಗಿಲ್ಲ. ಮತ್ತೊಂದು ಮೂಲದ ರೀತ್ಯ ಟೆಲ್ಕೋ, ಟಿಸ್ಕೋ, ಅಸೋಸಿಯೇಟೆಡ್ ಸಿಮೆಂಟ್, ಸಿಂಧಿಯಾ ಸ್ಟೀಂ ಮತ್ತಿನ್ನೆರಡು ಕಂಪನಿಗಳ ಆಸ್ತಿ ತಲಾ 200 ಕೋಟಿ ರೂ. ಗಳಿಗೂ ಮಿಕ್ಕಿದೆ (ಮಾ 31, 1981 ರ ಅಂತ್ಯಕ್ಕೆ).

ಭಾರತದಲ್ಲಿ ಕೈಗಾರಿಕೆ ಬೆಳೆದಿಲ್ಲವೆಂದು ಯಾರು ಹೇಳುತ್ತಾರೆ? ಈ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕ ಸ್ಥಿತಿ ಹೀನಾಯವಾಗಿದೆಯಷ್ಟೆ.

(ವಿವರ : 'ನ್ಯೂ ಏಜ್' ಕೃಪೆ)

ಕೋಲಾರದಲ್ಲಿ

ದಲಿತರಿಗೆ ಸಿ. ಪಿ. ಐ. (ಎಂ) ಬೆಂಬಲ

ಕೆ. ಜಿ. ಎಫ್. ನ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರ ಮೇಲೆ ಶಾಸಕ ಸಿ. ಎಂ, ಆರ್ಮುಗಂರ ಬಾಡಿಗೆ ಗೂಂಡಾಗಳು ಹಲ್ಲೆ ಮಾಡಿದ್ದನ್ನು ಖಂಡಿಸಿರುವ ಸಿಪಿಐ (ಎಂ) ಕೋಲಾರ ಜಿಲ್ಲಾ ಘಟಕವು ದಲಿತರನ್ನು ಬೆಂಬಲಿಸಿದೆ.

31-3-82 ರಂದು ಕೊಲಾರದಲ್ಲಿ ಜಿಲ್ಲಾ ಸಮಿತಿಯ ಸಭೆ ಸೇರಿತ್ತು. ರಾಜ್ಯ ಸಮಿತಿಯ ಸದಸ್ಯ ಕಾಂ॥ ಟಿ. ಎಸ್. ಮಣಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದು, ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ। ಎಂ. ಕೆ. ಯವರು ಮಾರ್ಗದರ್ಶನ ನೀಡಿದರು.

ದ. ಸಂ. ಸ. ಕಾರ್ಯಕರ್ತರಿಗೆ ರಕ್ಷಣೆ ನೀಡುವ ಬದಲು ಪೋಲಿಸರು ಆರ್ಮುಗಂರ ಪರ ನಿಂತಿದ್ದನ್ನು ಸಭೆ ತೀವ್ರವಾಗಿ ಖಂಡಿಸಿದೆ. ಈ ಹಲ್ಲೆಯ ಕುರಿತು ತೀವ್ರ ಕ್ರಮ ಕೈಗೊಳ್ಳದಿದ್ದಲ್ಲಿ ಜಿಲ್ಲೆಯ ಎಲ್ಲ ಪ್ರಗತಿ ಪರ ಶಕ್ತಿಗಳು ಜೊತೆಗೂಡಿ ಪ್ರತಿಭಟಿಸಬೇಕಾದೀತೆಂದು ಜಿಲ್ಲಾ ಸಮಿತಿ ಎಚ್ಚರಿಸಿ, ನ್ಯಾಯಾಂಗ ತನಿಖೆಗೆ ಒತ್ತಾಯಿಸಿದೆ.

ತುಂಗಭದ್ರಾ ಎಡದಂಡೆ ಕಾಲುವೆ

ಹುಸಿಯಾದ ಹಸಿರು ಕ್ರಾಂತಿ

ತುಂಗಭದ್ರಾ ಎಡದಂಡೆ ಕಾಲುವೆ ಸುಮಾರು ಐದು ಲಕ್ಷ ಎಕರೆ ಭೂಮಿಗೆ ನೀರೊದಗಿಸುತ್ತಿದ್ದು, ರೈತಾಪಿ ಜನತೆಯನ್ನು ದಾರಿದ್ರ್ಯದಿಂದ ವಿಮುಕ್ತಗೊಳಿಸುವ ಬದಲು ಇನ್ನಷ್ಟು ದಾರಿದ್ರ್ಯಕ್ಕೆ ಈಡುಮಾಡಿದೆ.

ಎಡಧಂಡೆ ರೈತರು ನೂರಾರು ಸಮಸ್ಯೆಗಳನ್ನು ಎದುರಿಸಿ, ಬದುಕಲು ಪ್ರಯತ್ನಿಸುತ್ತಿರುವಾಗಲೇ, ಸಾಲ-ಕಂದಾಯ, ನೀರಿನ ತೆರಿಗೆ, ದಂಡ, ಸುಸ್ತಿ ಬಡ್ಡಿ ಇವುಗಳಿಂದ ಬಳಲುತ್ತಿದ್ದಾರೆ. ಕಂದಾಯ ಅಧಿಕಾರಿಗಳು ರೈತರ ಮನೆಗಳನ್ನು ದಿನಬಳಕೆ ವಸ್ತುಗಳನ್ನು ದವಸ ಧಾನ್ಯಗಳನ್ನು ಜಪ್ತಿ ಮಾಡುತ್ತಿದ್ದಾರೆ, ಅಧಿಕಾರಿಗಳ ದುರ್ವರ್ತನೆಯನ್ನು ಗಂಗಾವತಿ, ಸಿಂಧನೂರು, ಮಾನ್ವಿ, ರಾಯಚೂರು ಮುಂತಾದೆಡೆ ರೈತರು ಪ್ರತಿಭಟಿಸಿ ಮಂತ್ರಿ ಶಾಸಕರಿಗೆ ಮನವಿ ಸಲ್ಲಿಸಿದ್ದರು.

ಹೋರಾಟ ಆರಂಭ:

ತಮ್ಮ ಅಸಂಖ್ಯ ಮನವಿಗಳಿಗೆ ಯಾವ ಪ್ರತಿಕ್ರಿಯೆ ಬಾರದಿದ್ದಾಗ ರೈತಾಪಿ ಜನ ಅನಿವಾರ್ಯವಾಗಿ ಹೋರಾಟ ಆರಂಭಿಸುವ ಸಿದ್ಧತೆ ನಡೆಸಿದೆ.

8-3-82 ರಂದು ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿ, ಹತ್ತಾರು ಸಲ ಕಾಲುವೆ ಹೊಡೆದು ರೈತ ಖರ್ಚು ಮಾಡಿದ ಗೊಬ್ಬರ-ಔಷಧಿ ಹಳ್ಳ ನದಿಗಳ ಪಾಲಾದಾಗ ಕಣ್ಣು ಹಾಯಿಸದೆ ಕೊಬ್ಬಿದ ಜನರನ್ನು ಎಚ್ಚರಿಸಲು ಸಾವಿರಾರು ಜನರು ಬೃಹತ್ ಮೆರವಣಿಗೆ -ಸಭೆ ನಡೆಸಿದರು. ನಮ್ಮ ಘನ ಸರಕಾರ ಇನ್ನೂ ಕಣ್ಮುಚ್ಚಿಯೇ ಕುಳಿತಿದೆ. (ಬೆಂಕಿ ಬಿದ್ದಾಗ ಬಾವಿ ತೋಡುವ ಜಾಯಮಾನವಲ್ಲವೇ ?)

ನೊಂದ ಈ ಭಾಗದ ರೈತರು 'ರೈತ ಕ್ರಿಯಾ ಸಮಿತಿ' ಯೊಂದನ್ನು ರಚಿಸಿಕೊಂಡಿದ್ದಾರೆ. ಈ ಸಮಿತಿಯ ನೇತೃತ್ವದಲ್ಲಿ ಸರಕಾರದ ಗಮನ ಸೆಳೆಯಲು ಉಪವಾಸ ಸತ್ಯಾಗ್ರಹ ಪ್ರಾರಂಭಿಸಲಾಗಿದೆ

ಹೋರಾಟವನ್ನು ಜಿಲ್ಲೆಯ ಇತರ ಭಾಗಗಳಿಗೂ ವಿಸ್ತರಿಸುವ ತೀರ್ಮಾನವನ್ನು ಕ್ರಿಯಾ ಸಮಿತಿ ಕೈಗೊಂಡಿದೆ.

ಬೇಡಿಕೆಗಳು ಈಡೇರುವ ವರೆಗೆ ಸತ್ಯಾಗ್ರಹ ಮುಂದುವರೆಸುವ ಧೃಢ ತೀರ್ಮಾನವನ್ನೂ ರೈತರು ತಳೆದಿದ್ದಾರೆ.

ಮೈಕೊ

ಒಪ್ಪಂದ ಕುರಿತು ಹೈಕೋರ್ಟು ತೀರ್ಪು....

ಮೈಕೋ ಆಡಳಿತ ವರ್ಗವು ಮೈಕೋ ಕಾರ್ಮಿಕ ಸಂಘ (MEA) ದ ಅಧ್ಯಕ್ಷ ಕಾಂ॥ ಸೂರ್ಯನಾರಾಯಣ ರಾವ್‌ರೊಂದಿಗೆ ಬೇಡಿಕೆಗಳ ಬಗ್ಗೆ ಚರ್ಚೆ ನಡೆಸುತ್ತಿತ್ತು. ಮಾರ್ಚ್ 81 ರಲ್ಲಿ ಎಫ್. ಎಂ. ಖಾನ್ ಗುಂಪಿನವರು ಸಂಘದ ಚುನಾವಣೆ ನಡೆಯುವ ವರೆಗೂ ಒಪ್ಪಂದವಾಗಬಾರದೆಂದು ಕಾರ್ಮಿಕಮಂತ್ರಿ ಜಕನೂರ್ ಮುಖಾಂತರ ಲೇಬರ್ ಕಮೀಷನರ್ ಮೇಲೆ ಒತ್ತಾಯ ತಂದಿದ್ದರಿಂದ ಕನ್ಸಲಿಯೇಷನ್, ಮಾತುಕತೆ ನಿಂತುಹೋದವು.

ಚುನಾವಣೆಗೋಸ್ಕರವೆಂದೇ 5000 ರೂ. ಡಿಪಾಸಿಟ್ ಇಡಲು ತನ್ನ ಕಾರ್ಯಕಾರಿ ಸಮಿತಿ ತಿರ್ಮಾನಿಸಿರುವುದಾಗಿ MEA ಲೇಬರ್ ಕಮೀಷನರ್ ಅವರಿಗೆ ತಿಳಿಸಿತ್ತು. ಲೇಬರ್ ಕಮೀಷನರ್ ಅವರು ಡಿ ಎಲ್ ಸಿ (ಡೆಪ್ಯೂಟಿ ಲೇಬರ್ ಕಮೀಷನರ್) ಯವರನ್ನು ಚುನಾವಣಾಧಿಕಾರಿಗಳನ್ನಾಗಿ ನೇಮಿಸಿದರು. ಆದರೂ ಸಹ ಎಂ. ಎಫ್. ಖಾನ್ ಗುಂಪಿನವರು ಚುನಾವಣೆಗೆ ತಯಾರಿಲ್ಲದ ಕಾರಣ ಚುನಾವಣೆ ನಡೆಯಲಿಲ್ಲ.

23-7-81ರಂದು ಇದ್ದಕ್ಕಿದ್ದ ಹಾಗೆ ಮೈಕೋ ಆಡಳಿತ ವರ್ಗದವರು ಎಫ್. ಎಂ. ಖಾನ್ ರೊಂದಿಗೆ ಕೆಲಸಗಾರರ ಬೆನ್ನ ಹಿಂದೆ ಒಂದು ಒಪ್ಪಂದ ಮಾಡಿಕೊಂಡು ಅದನ್ನು ಊರ್ಜಿತ ಮಾಡಿಕೊಳ್ಳುವ ಪ್ರಯತ್ನದಲ್ಲಿ 24 ಘಂಟೆಯೊಳಗೇ ಸುಮಾರು ಒಂದೂವರೆ ಕೋಟಿ ರೂ. ಹಣವನ್ನು ಕೆಲಸಗಾರರಿಗೆ ಪಾವತಿ ಮಾಡಿತ್ತು.

ಈ ಒಪ್ಪಂದ ಸರಿ ಅಲ್ಲ, ಕೈಗಾರಿಕಾ ಕಾಯ್ದೆ 12(3) ರ ಪ್ರಕಾರ ಕನ್ಸಲೀಯೇಷನ್‌ನಲ್ಲಿ ಆದ ಒಪ್ಪಂದವಲ್ಲವೆಂದು MEA ಅಧ್ಯಕ್ಷ ಕಾಂ। ಸೂರ್ಯನಾರಾಯಣರಾವ್ ಮತ್ತಿತರ ಪದಾಧಿಕಾರಿಗಳು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ರಿಟ್ ಅರ್ಜಿ ನ್ಯಾಯಾದೀಶ ಜೋಸಣ್ಣನವರ ಮುಂದೆ ಬಂದು, ವಾದ ವಿವಾದಗಳಾದ ನಂತರ, ಮೈಕೋ ಆಡಳಿತ ವರ್ಗ ಎಫ್. ಎಂ. ಖಾನ್ ನೊಡನೆ ಮಾಡಿಕೊಂಡ ಒಪ್ಪಂದ ಕೈಗಾರಿಕಾ ಕಾಯ್ದೆ 12 (3) ರಂತೆ ಕನ್ಸಲೀಯೇಷನ್ ಒಪ್ಪಂದವಲ್ಲವೆಂಬ, ಮೈಕೋ ಸಂಘದ ವಾದವನ್ನು ಎತ್ತಿಹಿಡಿದು 29-3-82 ರಂದು ತೀರ್ಪಿತ್ತಿದ್ದಾರೆ. ಅದಾಗ್ಯೂ ಕೆಲವು ಕಾರಣಗಳನ್ನು ತೋರಿಸಿ ರಿಟ್ ಅರ್ಜಿ ವಜಾ ಮಾಡಿದ್ದಾರೆ.

ಸಂಘದ ವಾದವನ್ನು ಎತ್ತಿ ಹಿಡಿದಿದ್ದರೂ ರಿಟ್ ಅರ್ಜಿಯನ್ನು ವಜಾ ಮಾಡಿರುವುದರ ವಿರುದ್ಧ ಮೈಕೋ ಕಾರ್ಮಿಕರ ಸಂಘ ಸುಪ್ರೀಂ ಕೋರ್ಟ್‌ಗೆ ಅಪೀಲು ಹೋಗಲಿದೆ.

ಮೈಕೋ ಮ್ಯಾನೇಜ್‌ಮೆಂಟನವರು ಏನೇ ಪ್ರಯತ್ನ ಮಾಡಿದರೂ ಸಂಘವನ್ನು ಛಿದ್ರಮಾಡುವುದು ಸಾಧ್ಯವಿಲ್ಲವೆಂದರಿತು ಈಗ ಕಾಂ। ಸೂರಿಯವರನ್ನು NSA ನಲ್ಲಿ ದಸ್ತಗಿರಿ ಮಾಡಿಸಲು ಪ್ರಯತ್ನ ನಡೆಸುತ್ತಿದೆ ಎಂಬ ಸುದ್ದಿ ಬಂದಿದೆ.

ಈ ಕಾರ್ಮಿಕ ವಿರೋಧಿ ನೀತಿಯನ್ನು ವಿಫಲಗೊಳಿಸಲು ಸಂಕಲ್ಪ ಮಾಡಿರುವ ಮೈಕೋ ಕಾರ್ಮಿಕರು ಅಭಿನಂದನಾರ್ಹರು.

ಪಿ ಯು ಸಿ ಪ್ರಶ್ನೆ ಪತ್ರಿಕೆಗಳ ಬಯಲು :

ತುರ್ತು ವಿಚಾರಣೆಗೆ ಎಸ್ ಎಫ್ ಐ ಒತ್ತಾಯ

ಎರಡನೆಯ ಪಿ. ಯು. ಸಿ. ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಕಳವು ಹಾಗೂ ಬಯಲಾಗುವಿಕೆಯಿಂದಾಗಿ ಮುಂದೂಡಲ್ಪಟ್ಟಿದ್ದು ಇದರಿಂದಾಗಿ ಲಕ್ಷಾಂತರ ವಿದ್ಯಾರ್ಥಿಗಳು ಹಾಗೂ ಅವರ ಪಾಲಕರು ಮಾನಸಿಕ ಹಿಂಸೆ ಅನುಭವಿಸಬೇಕಾಗಿ ಬಂದಿರುವ ಬಗ್ಗೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ ಎಫ್ ಐ) ಆತಂಕಗೊಂಡಿದೆ. ದಿಢೀರನೆ ಮುಂದೂಡಲ್ಪಟ್ಟ ಪರೀಕ್ಷೆಗಳು ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲತೆಯನ್ನುಂಟು ಮಾಡಿದೆ. ಪಿ ಯು ಸಿ ಮಂಡಲಿಯ ಬೇಜವಾಬ್ದಾರಿ ಮತ್ತು ಅಸಮರ್ಥ ಆಡಳಿತ ರೀತಿಯನ್ನು ಎಸ್ ಎಫ್ ಐ ಖಂಡಿಸುತ್ತದೆ.

ಪ್ರಶ್ನೆ ಪತ್ರಿಕೆಗಳನ್ನಿರಿಸಿದ್ದ ಸ್ಥಳದಲ್ಲಿ ಕಾವಲಿದ್ದ ಪೋಲೀಸ್ ಪೇದೆಯು ಘಟನೆ ನಡೆದಾಗ ಸ್ಥಳದಲ್ಲೇ ಇರದಿದ್ದದ್ದು ಹಾಗೂ ಕಳವಾದ ಪ್ರಶ್ನೆ ಪತ್ರಿಕೆಗಳು ಬಳ್ಳಾರಿ ಜಿಲ್ಲೆಯಿಂದ ತುಂಬಾ ದೂರದಲ್ಲಿರುವ ದ. ಕ. ಜಿಲ್ಲೆ ಮತ್ತು ಉ. ಕ. ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳ ಕೈಗೆ ಸಿಕ್ಕಿರುವುದು—ಈ ಘಟನೆಯು ಪೂರ್ವ ಯೋಜಿತವೆನ್ನುವ ಸಂದೇಹವನ್ನುಂಟುಮಾಡಿದೆ. ಈ ಎಲ್ಲದರ ಬಗ್ಗೆ ಸೂಕ್ತ ವಿಚಾರಣೆ ತುರ್ತಾಗಿ ನಡೆಯಬೇಕೆಂದು ಎಸ್ ಎಫ್ ಐ ಒತ್ತಾಯಿಸುತ್ತದೆ.

ಪರೀಕ್ಷೆಗಳ ವಿಳಂಬದಿಂದಾಗಿ ಫಲಿತಾಂಶವು ತಡವಾಗಿ ಪ್ರಕಟವಾಗಲಿದ್ದು ಇದರಿಂದ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ತೀವ್ರ ಅನಾನುಕೂಲಗಳಾಗಲಿದ್ದು, ಇದನ್ನು ನಿವಾರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಎಸ್ ಎಫ್ ಐ ನ ರಾಜ್ಯ ಸಮಿತಿ ಅಧ್ಯಕ್ಷ ಕಾಂ। ಜಯಕುಮಾರ್ ಸರಕಾರವನ್ನು ಅಗ್ರಹ ಪಡಿಸಿದ್ದಾರೆ.

ನೇಕಾರರ ಮನವಿ

ದೊಡ್ಡಬಳ್ಳಾಪುರ ಮತ್ತು ಬೆಂಗಳೂರು ಕೆ. ಇ. ಬಿ. ಆಫೀಸುಗಳಲ್ಲಿ ರೂ. 520 ಭದ್ರತಾ ಠೇವಣಿಯನ್ನು ಎಲ್ಲ ಇನ್‌ಸ್ಟಾಲೇಷನ್‌ಗಳಿಗೂ ಹಾಕಿರುವುದನ್ನು ಪ್ರತಿಭಟಿಸಿ ದೊಡ್ಡಬಳ್ಳಾಪುರದ ಸಣ್ಣ ನೇಕಾರರು ಮನವಿ ಸಲ್ಲಿಸಿದ್ದಾರೆ.

ಈಗಾಗಲೇ ರೇಷ್ಮೆ ಉದ್ಯಮದಲ್ಲಿ ಉಂಟಾಗಿರುವ ತೊಂದರೆಯಿಂದ ತತ್ತರಿಸುತ್ತಿರುವ ಸಣ್ಣ ನೇಕಾರರು ಸಾರಾಸಗಟು ರೂ. 520 ಭದ್ರತಾ ಠೇವಣಿ ಹಾಕಿರುವುದು ಅನ್ಯಾಯವೆಂದು ಸರಕಾರ ಮತ್ತು ಕೆ. ಇ. ಬಿ. ಗೆ ತಿಳಿಸಿದ್ದಾರೆ.

ಈ ಚಳುವಳಿ ಬೇಕೆ?

(1ನೇ ಪುಟದಿಂದ)

ಈ ಅಂಶಗಳೆನ್ನೆಲ್ಲ ಗಣನೆಯಲ್ಲಿಟ್ಟುಕೊಟ್ಟುಕೊಂಡು ಸರಕಾರವು ಒಂದು ನಿರ್ಣಯಕ್ಕೆ ಬರಲಿ. ವಿಳಂಬಗೊಳಿಸಿದರೆ ಚಳುವಳಿ ವಿಕೋಪಕ್ಕೆ ಹೋಗಬಹುದು. ಎಲ್ಲಾ ರಾಜಕೀಯ ಪಕ್ಷಗಳ ನಾಯಕರ, ಮತ್ತಿತರ ಭಾಷಾ ಪ್ರತಿನಿಧಿಗಳನ್ನು ಸೇರಿಸಿ, ಕೂಲಂಕುಷ ಚರ್ಚಿಸಿ ಒಂದು ಅಂತಿಮ ತೀರ್ಮಾನಕ್ಕೆ ಸರ್ಕಾರ ಬರಲಿ. ಅದನ್ನು ಕಾರ್ಯಗತಗೊಳಿಸುವಾಗ ಅದರಲ್ಲಿ ಏನಾದರೂ ಬದಲಾವಣೆಯಾಗಬೇಕೆಂದು ಕಂಡು ಬಂದರೆ ಅದನ್ನು ಮುಂದಕ್ಕೆ ತರಬಹುದು. ಈ ಪ್ರಶ್ನೆಗಳಲ್ಲಿ ಕೊನೆಯ ಪರಿಹಾರವೆಂದನೂ ಇಲ್ಲ. ಅದನ್ನು ಭವಿಷ್ಯಕ್ಕೆ ಬಿಡೋಣ. ಕನ್ನಡವನ್ನು ಕಡ್ಡಾಯಗೊಳಿಸೋಣ. ಆದರೆ ಅದನ್ನು ಪ್ರಥಮ ಭಾಷೆಯನ್ನಾಗಿಯೇ ಮಾಡಬೇಕೆಂದೇನೂ ಇಲ್ಲವೆಂದು ಹೇಳಿದರೆ ತಪ್ಪೇನಿದೆ? ಇದರ ಬಗ್ಗೆ ಚಳುವಳಿ ನಡೆಸುವುದು ಸೂಕ್ತವಲ್ಲ.

ಯಶಸ್ವೀ ಪ್ರತಿಭಟನಾ ದಿನಾಚರಣೆ

(1ನೇ ಪುಟದಿಂದ)

ತಹಸೀಲ್ದಾರರ ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಯಿತು. ನಂತರ ನಿಯೋಗವೊಂದು ತಹಸೀಲ್ದಾರರನ್ನು ಭೇಟಿಮಾಡಿ ರೈತರ ಬೇಡಿಕೆಗಳ ಕುರಿತು ಮನವಿ ಸಲ್ಲಿಸಿತು. ಸಾಯಂಕಾಲ ರೈತ ಕಾರ್ಮಿಕರು ಜೊತೆಗೂಡಿ ಬೃಹತ್ ಮೆರವಣಿಗೆ, ಮತಪ್ರದರ್ಶನ ನಡೆಸಿದರು. ನಂತರ ಉಡುಪಿ ಮಿಷನ್ ಕಾಂಪೌಂಡ್ ಪಕ್ಕದಲ್ಲಿರುವ ಮೈದಾನದಲ್ಲಿ ಕಾಂ| ರಾಮ್. ಕೆ. ಕುಂದರ್ ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಆರಂಭದಲ್ಲಿ ಕಾಂ| ಟಿ. ಎಸ್. ಕೋಟ್ಯಾನ್ ಸ್ವಾಗತಿಸಿದರು. ಬಹಿರಂಗ ಸಭೆಯನ್ನುದ್ದೇಶಿಸಿ ಬಿ. ರಾಮಚಂದ್ರ ಭಟ್, ಖ್ಯಾತ ನ್ಯಾಯವಾದಿ ಶ್ರೀಧರ ಕಲ್ಮಾಡಿ ಮೊದಲಾದವರು ಮಾತನಾಡಿದರು. ಕೊನೆಯಲ್ಲಿ ಕಾಂ| ಡೇವಿಡ್ ಕರ್ಕಡ್ ಅವರು ಧನ್ಯವಾದ ಸಲ್ಲಿಸಿದರು.

ಬೀದರ್ :

ಬೀದರಿನಲ್ಲಿ ಏಪ್ರಿಲ್ 5 ರಂದು ಪ್ರತಿಭಟನಾ ದಿನಾಚರಣೆಯ ಅಂಗವಾಗಿ ರೈತರ ಮೆರವಣಿಗೆ, ಮತ ಪ್ರದರ್ಶನ ನಡೆದವು. 5-4-82 ರಂದು ಬೆಳಿಗ್ಗೆ ಅಂಬೇಡ್ಕರ್ ಚೌಕದಿಂದ ಮೆರವಣಿಗೆ ಹೊರಡಿಸಲಾಗಿತ್ತು. ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಕಾರ್ಯಕ್ರಮದ ನೇತೃತ್ವವನ್ನು ಕಾಂ| ಸುಂದರರಾಜ್, ಶಿವಶೆಟ್ಟಿ ಚಲುವಾ, ಬೊಮ್ಮಾರೆಡ್ಡಿ ಮತ್ತು ಕಾಂ| ಸಂಗ್ರಾಮ ಮತ್ತಿತರರು ವಹಿಸಿದ್ದರು.

ಧಾರವಾಡ :

ಪ್ರತಿಭಟನಾ ದಿನಾಚರಣೆಯ ಅಂಗವಾಗಿ ಏಪ್ರಿಲ್ 5 ರಂದು ಧಾರವಾಡದಲ್ಲಿ ಪ್ರಾಂತ ರೈತಸಂಘದ ಜಿಲ್ಲಾ ಘಟಕದ ನೇತೃತ್ವದಲ್ಲಿ ರೈತ-ಕೃಷಿಕೂಲಿಕಾರರ ಮೆರವಣಿಗೆ ನಡೆದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಮಧ್ಯಾಹ್ನ 3 ಘಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ನಡೆದ ಬಹಿರಂಗಸಭೆಯನ್ನುದ್ದೇಶಿಸಿ ಪ್ರಾಂತ ರೈತ-ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ವಿ. ಎನ್. ಹಳಕಟ್ಟಿ ಮಾತನಾಡಿದರು. ಕಾರ್ಯಕ್ರಮದ ನೇತೃತ್ವವನ್ನು ಜಿಲ್ಲಾ ಘಟಕದ ಸಂಚಾಲಕ ಕಾಂ| ಗಂಗಾಧರ ಪಲ್ಲೇದ ಮತ್ತು ಕೃಷಿ ಕೂಲಿಕಾರರ ಸಂಘನೆಯ ಸಂಚಾಲಕ ಕಾಂ| ವೈ. ಆರ್. ಪೂಜಾರ್ ವಹಿಸಿದ್ದರು.

ಶಿವಮೊಗ್ಗ :

ಪ್ರತಿಭಟನಾ ದಿನಾಚರಣೆಯ ಅಂಗವಾಗಿ ಏಪ್ರಿಲ್ 5 ರಂದು ತೀರ್ಥಹಳ್ಳಿಯಲ್ಲಿ ರೈತರ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ತಹಸೀಲ್ದಾರರಿಗೆ ಸಲ್ಲಿಸಲಾಯಿತು. ನಿಯೋಗದ ಮುಖಂಡತ್ವವನ್ನು ಕಾಂ| ಕೆ. ಚಂದೂಕುಟ್ಟಿ, ಕೆ. ಎಂ. ಶ್ರೀನಿವಾಸ್, ರಾಘವೇಂದ್ರರಾವ್, ಎಸ್. ಎಚ್. ಸುಬ್ಬಯ್ಯಗೌಡ, ಮಾಸಪ್ಪ ಮುಂತಾದವರು ವಹಿಸಿದ್ದರು.

(ಉಳಿದೆಲ್ಲ ಕಡೆ ನಡೆದ ಕಾರ್ಯಕ್ರಮಗಳ ಪೂರ್ತಿ ವಿವರ ಲಭ್ಯವಿಲ್ಲದ್ದರಿಂದ ಮುಂದಿನವಾರ ಬೇರೆ ಬೇರೆ ಕಡೆ ನಡೆದ ಪ್ರತಿಭಟನಾ ದಿನಾಚರಣೆ ಕಾರ್ಯಕ್ರಮದ ವಿವರ ಪ್ರಕಟಿಸಲಾಗುವುದು.)

ಬೀದರ್ :

ಹಲ್ಲೆಯ ಖಂಡನೆ

ರಾಜೇಶ್ವರದ (ಬೀದರ್) ಜೈಭಾರತ ಖಂಡಸಾರಿಶುಗರ್ ಫ್ಯಾಕ್ಟರಿಯ ಆಡಳಿತ ವರ್ಗವು ಯೂನಿಯನ್ ಕಾರ್ಯದರ್ಶಿ ಶ್ರೀ ಬೊಮ್ಮರೆಡ್ಡಿಯವರ ಮೇಲೆ ಗೂಂಡಾಗಳನ್ನು ಛೂ ಬಿಟ್ಟು ಹಲ್ಲೆ ನಡೆಸಿರುವುದನ್ನು ಕಾಂಗ್ರೆಸ್ (ಎಸ್) ಬೀದರ್ ಜಿಲ್ಲಾ ಘಟಕದ ಅಧ್ಯಕ್ಷ ಶ್ರೀ ಬಾಬೂರಾವ್ ಗೊರ್‌ಚಿಂಚೋಳಿ, ಜನತಾ ಪಾರ್ಟಿ ಕಾರ್ಯದರ್ಶಿ ಈಶ್ವರಪ್ಪ ಚಕೋತೆ, ಸಿ. ಪಿ. ಐ. (ಎಂ) ನ ಕಾರ್ಯದರ್ಶಿ ಕಾಂ| 'ಎಂ. ಎನ್. ಸುಂದರರಾಜ್ ಇವರುಗಳು ಜಂಟೀ ಹೇಳಿಕೆಯೊಂದನ್ನು ಹೊರಡಿಸಿ ತೀವ್ರವಾಗಿ ಖಂಡಿಸಿದ್ದಾರೆ.

ಈ ಹಲ್ಲೆಗೆ ಕಾರಣರಾದವರ ಮೇಲೆ ಪೋಲೀಸ್ ಇಲಾಖೆ ತೀವ್ರ ಕ್ರಮಕ್ಕೆ ಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಅಂತರಂಗ—ಬಹಿರಂಗ

(ಒಂದನೇ ಪುಟದಿಂದ)

ಸ್ಥಾಪಿಸುವದಾಗಿ ಘೋಷಿಸಿಕೊಳ್ಳುವಂತಾಗಿದೆ. ಇವು ಆಂಧ್ರ ಪ್ರದೇಶದ ರಾಜಕೀಯದಲ್ಲಿ ಅತೀ ಮಹತ್ವದ ಮತ್ತು ನಿರ್ಣಾಯಕ ಬೆಳವಣಿಗೆಗಳಾಗಿವೆ.

ಮಹಾರಾಷ್ಟ್ರವು ಕಾಂಗ್ರೆಸ್‌ನ ಬಲಿಷ್ಠ ಕೋಟೆ ಎನ್ನಬಹುದಾದ ಇನ್ನೊಂದು ರಾಜ್ಯ. ಇಲ್ಲಿಯೂ ಕೂಡ ಪಕ್ಷದ ಅತೀ ಕಟ್ಟುನಿಟ್ಟಾದ ಆದೇಶವನ್ನು ಸಹ ಮೀರಿ ಕೆಲವು ಕಾಂಗ್ರೆ ಎಂ ಎಲ್ ಎ ಗಳು ವಿರೋಧಿ ಅಭ್ಯರ್ಥಿಗಳಿಗೆ ಮತ ಚಲಾಯಿಸಿದ್ದಾರೆ. ಹೀಗಾಗಿ ವಿರೋಧಿ ಪಕ್ಷದ ಅಭ್ಯರ್ಥಿಯಾದ ಕಾಂಗ್ರೆಸ್ (ಎಸ್) ನ ಸುರೇಶ್ ಕಲ್ಮಾಡಿ ರಾಜ್ಯ ಸಭೆಗೆ ಚುನಾಯಿತರಾಗಿದ್ದಾರೆ. ಇನ್ನೂ ಹೆಚ್ಚಾಗಿ ಕಾಂಗ್ರೆಸ್ ಅಭ್ಯರ್ಥಿ ಎಂ. ಸಿ. ಭಂಡಾರಿ ಅವರು ಆರನೇ ಸುತ್ತಿನ ಮತ ಎಣಿಕೆಯಲ್ಲಿ ಮಾತ್ರ ಚುನಾಯಿತರಾಗಿರುವುದಾಗಿ ಘೋಷಿಸುವಂತಾಗಿದೆ.

ಉತ್ತರ ಪ್ರದೇಶದಲ್ಲೂ ಕೂಡ ಕಾಂಗ್ರೆಸ್‌ನ ಪರಿಸ್ಥಿತಿ ಸಂತೋಷದಾಯಕವಾಗಿಲ್ಲ. ವಿಧಾನ ಸಭೆಯಲ್ಲಿರುವ ಕಾಂಗ್ರೆಸ್‌ನ ಸಾಮರ್ಥ್ಯ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿದ್ದು ಕಾಂಗ್ರೆಸ್‌ನ ಎಲ್ಲ ಒಂಬತ್ತು ಅಭ್ಯರ್ಥಿಗಳು ಮೊದಲ ಸುತ್ತಿನ ಮತ ಎಣಿಕೆಯಲ್ಲೇ ಚುನಾಯಿತರೆಂದು ಘೋಷಿಸಲ್ಪಡಬಹುದಾಗಿದ್ದರೂ, ಎರಡು ಅಭ್ಯರ್ಥಿಗಳು ಎರಡನೇ ಸುತ್ತಿನ ಎಣಿಕೆ ಮುಗಿಯುವವರೆಗೆ ಕಾಯಬೇಕಾಯಿತು. ಇದಕ್ಕೆ ತದ್ವಿರುದ್ಧವಾಗಿ ಲೋಕ ದಳದ ಅಭ್ಯರ್ಥಿಯೊಬ್ಬ ಮೊದಲ ಸುತ್ತಿನ ಎಣಿಕೆಯಲ್ಲೇ ವಿಜಯಿಯಾದ.

ಕಾಂಗ್ರೆಸ್‌ನ ಅಭ್ಯರ್ಥಿಗಳೇ ಗೆದ್ದಿದ್ದರೂ ಗುಜರಾತಿನಲ್ಲೂ ಸಹ ಕಾಂಗ್ರೆ ಮತದಾನಪಕ್ಷ ಯೋಚಿಸಿದ್ದ ಹಂಚಿಕೆಯ ರೀತಿಯಲ್ಲಿ ನಡೆಯಲಿಲ್ಲ. ಒಬ್ಬ ಅಭ್ಯರ್ಥಿಗೆ ಹಂಚಿದ್ದ ಮತಗಳಿಗಿಂತಲೂ ಅತಹೆಚ್ಚಿನ ಮತಗಳನ್ನು ಪಡೆದಿದ್ದು, ಇನ್ನೊಬ್ಬನಿಗೆ ಹಂಚಿದ್ದ ಮತಗಳಿಗಿಂತಲೂ ಕಡಿಮೆ ಮತಗಳನ್ನು ಪಡೆದದ್ದು ಅಲ್ಲಿಯ ಕಾಂಗ್ರೆಸ್‌ನಲ್ಲಿನ ತೀವ್ರ ಗುಂಪು ಜಗಳವನ್ನು ಎತ್ತಿ ತೋರಿಸುತ್ತದೆ. ಮುಖ್ಯ ಮಂತ್ರಿಯ ವಿರೋಧಿ ಗುಂಪಿಗೆ ಸೇರಿದ್ದ ಮಕ್ವಾನಾರ ಹೆಸರು ಮೊದಲು ರಾಜ್ಯ ಸಭೆ ಅಭ್ಯರ್ಥಿ ನಾಮಕರಣದಲ್ಲಿ ಬಿಟ್ಟು ಹೋದದ್ದು, ಕೊನೆಯ ಗಳಿಗೆಯಲ್ಲಿ ಸೇರಿಸುವಂತಾದರೂ ಕಾಂಗ್ರೆಸ್‌ನ ಉಳಿದೆಲ್ಲ ಅಭ್ಯರ್ಥಿಗಳಿಗಿಂತಲೂ ಹೆಚ್ಚಿನ ಮತ ಬಿದ್ದು ಅವರು ಚುನಾಯಿತಗೊಳ್ಳುವಂತಾಗಿದೆ.

ರಾಜ್ಯಸಭಾ ಚುನಾವಣಾ ಫಲಿತಾಂಶಗಳಿಗಿಂತಲೂ ಹೆಚ್ಚಿನ ಆಸಕ್ತಿ ಕೆರಳಿಸುವ ಬೆಳವಣಿಗೆಯೆಂದರೆ ಕಾಂಗ್ರೆಸ್‌ನಲ್ಲಿ ವಿಶೇಷವಾಗಿ ಪಕ್ಷದ ಯುವ ವಿಭಾಗದಲ್ಲಿ ಉದ್ಭವಿಸಿರುವ ಸ್ಫೋಟಕ ಪರಿಸ್ಥಿತಿ, ಪ್ರಧಾನ ಮಂತ್ರಿಯ ಸೊಸೆಯು ಅತ್ತೆಗೆದುರಾಗಿ ಬಂಡೆದ್ದು ಅತ್ತೆಯ ಮನೆ ತೊರೆದು ಹೊರ ಹೋದುದು ಮುಂದೆ ಸಂಭವಿಸಬಹುದಾದ ಘಟನೆಗಳ ಪೈಕಿ ಅತಿ ಸಣ್ಣ ಮೊದಲನೆಯ ಸಂಗತಿಯಾಗಿದೆ. ಉತ್ತರ ಪ್ರದೇಶದ ಯುವ ಕಾಂಗ್ರೆಸ್‌ನ ರಾಜ್ಯ ಸಮ್ಮೇಳನ ಎಂದಿದ್ದರೂ ಅದಕ್ಕೆ ಹಲವಾರು ರಾಜ್ಯಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದ ಯುವಜನ ಸಮ್ಮೇಳನವನ್ನು ಕೊನೆಗೂ ಮೇನಕಾ ಗಾಂಧಿ ಉದ್ಘಾಟಿಸಿದ್ದಕ್ಕಾಗಿ ಪ್ರಧಾನ ಮಂತ್ರಿಯವರ ಮನೆಯಿಂದ ಹೊರಗೆ ಹೋಗಬೇಕಾಗಿ ಬಂತು. ಅಲ್ಲಿ ಸಮ್ಮೇಳನದಲ್ಲಿ ದಿ|| ಸಂಜಯ ಗಾಂಧಿಯವರ ನಿಕಟವರ್ತಿ ಸಂಗಾತಿಗಳೆನ್ನುವವರು ಪ್ರಸ್ತುತಕಾಂಗ್ರೆಸ್ ನಾಯಕತ್ವದಿಂದ ಕಡೆಗಣಿಸಲ್ಪಟ್ಟವರಾಗಿದ್ದಾರೆಂಬ ತಮ್ಮ ದುಃಖದುಮ್ಮಾನವನ್ನು ತೋಡಿಕೊಳ್ಳುವಂತಾಗಿತ್ತು. ಸಮ್ಮೇಳನವನ್ನು ಸಂಘಟಿಸಿದ್ದಕ್ಕಾಗಿ, ಅದರಲ್ಲಿ ಮೇನಕಾ ಭಾಗವಹಿಸಿದ್ದಕ್ಕಾಗಿ ಕಾಂಗ್ರೆಸ್‌ನಲ್ಲಿ ತೀವ್ರ ವಿರೋಧ ಭಾವನೆಗಳು ವ್ಯಕ್ತಪಟ್ಟದ್ದನ್ನು ನೋಡುವದಾಗಿದ್ದರೆ ಸ್ವತಃ ಇಂದಿರಾ ಗಾಂಧಿಯು ಪಕ್ಷ ವಿರೋಧಿ ಆಗಿತ್ತೆಂಬ ಆಪಾದನೆ ಹೊರಿಸಿ ಸಂಘಟಕನನ್ನು ಪಕ್ಷದಿಂದ ಉಚ್ಚಾಟಿಸಿದ್ದುದಾಗಿತ್ತು, ಅದೂ ಕಾಂಗ್ರೆಸ್‌ನ ಯುವಜನ ಮೇಳ ನಡೆಯಿತಲ್ಲದೆ ಸಮ್ಮೇಳನದಲ್ಲಿ ಮುಂದಿನ ಸೂಕ್ತಕ್ರಮಗಳನ್ನು ಯೋಜಿಸಿ ಮುಂದುವರಿಸಿಕೊಂಡು ಹೋಗಲು ಸಂಘಟನೆಯೊಂದನ್ನು ಹುಟ್ಟು ಹಾಕಲು ನಿರ್ಧರಿಸಿತು.

ರಾಜ್ಯಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಮತಗಳು ವಿರೋಧಿ ಅಭ್ಯರ್ಥಿಗಳಿಗೆ ಚಲಾಯಿಸಲ್ಪಟ್ಟ ಹಿನ್ನೆಲೆಯಲ್ಲೇ ಆಂಧ್ರದಲ್ಲಿ ಹೊಸ ಪಕ್ಷ ಸ್ಥಾಪಿತಗೊಂಡ್ದುದು ಮತ್ತು ಕಾಂಗ್ರೆಸ್ (ಎಸ್) ನ ಶರದ್ ಪವಾರ್ ಹೇಳುವಂತೆ, ಮೇನಕಾ ಗುಂಪಿನ ಒಂಬತ್ತು ಕಾಂಗ್ರೆ ಎಂ ಎಲ್ ಎ ಗಳು ತಮ್ಮ ಅಭ್ಯರ್ಥಿಗೆ ಮತ ಚಲಾಯಿಸಿದ್ದಾರೆನ್ನುವುದು ಅತ್ಯಂತ ಮೆಲೋಡ್ರಾಮಾ ರೀತಿಯಲ್ಲಿ ಮೇನಕಾ ಸುತ್ತ ತಿರುಗಿದ ಸಮ್ಮೇಳನವು ರಾಜಕೀಯ ಮಹತ್ವವನ್ನು ಪಡೆದುಕೊಳ್ಳುತ್ತದೆ.

ಸ್ವತಃ ಪ್ರಧಾನ ಮಂತ್ರಿ ಮತ್ತು ಅವರ ಪಕ್ಷದ ಇನ್ನಿತರ ಸಹಪಾಠಿಗಳು ತೀರ ಹೀನಾಯ ರೀತಿಯಲ್ಲಿ ವಿಶೇಷವಾಗಿ ಮೇನಕಾಳನ್ನು ಮತ್ತು ಸಮ್ಮೇಳನ ಸಂಘಟಿಸಿದ ಇನ್ನಿತರರನ್ನು ಆರ್. ಎಸ್. ಎಸ್. ನ ಏಜೆಂಟರೆಂದು ದೊಡ್ಡ ಪ್ರಚಾರ ನಡೆಸಿ ತೆಗಳಿದರು. ಒಂದು ವೇಳೆ ಈ ತೆಗಳುವಿಕೆಯು ಸತ್ಯ ಸಂಗತಿಯೆ ಆಗಿದ್ದಲ್ಲಿ ನಮ್ಮ ಮುಂದೆ ಪ್ರಶ್ನೆಯೊಂದು ಉದ್ಭವಿಸುತ್ತದೆ: ಅದು ಹೇಗೆ ಅಷ್ಟೊಂದು ಕಾಂಗ್ರೆಸ್ ಯುವಕ-ಯುವತಿಯರು ಪ್ರಧಾನ ಮಂತ್ರಿಯ ಸೊಸೆಯನ್ನು ಮೊದಲುಗೊಂಡು ತಮ್ಮನ್ನು ತಾವು ಆರ್. ಎಸ್. ಎಸ್. ಏಜೆಂಟರುಗಳಾಗಿ ಉಪಯೋಗಿಸಿಕೊಳ್ಳಲು ಅನುಕೂಲವಾದರು? ಇವರನ್ನೆಲ್ಲ ನೋಡಿದರೆ ಆ ಪಕ್ಷದಲ್ಲಿ ಅತೀ ಹೇಸಿಗೆ ಬರುವಷ್ಟು ಕೀಳಾದದ್ದು ಇದೆ. ಆದ್ದರಿಂದ ಇದೇನು ಅಷ್ಟು ಶಕ್ತಿಶಾಲಿಯಾದ ಸುಭದ್ರವಾದ ಪಕ್ಷವಲ್ಲವೆನ್ನುವುದು ಸಹಜವಾಗಿಯೆ ಇದೆಲ್ಲದರಿಂದ ಸ್ಪಷ್ಟವಾಗಿ ಕಂಡರಿಯುವ ವಿಷಯವಾಗಿದೆ.

ಪರಿಸರ

● ಕನ್ಯಾಕುಮಾರಿ ಜಿಲ್ಲೆಯ ಕರಾವಳಿಯುದ್ದಕ್ಕೂ ತನ್ನ ನಾಲಗೆಯನ್ನು ಚಾಚಿದ ಕೋಮು ದ್ವೇಷದ ಜ್ವಾಲೆಯನ್ನು ತಾತ್ಕಾಲಿಕವಾಗಿಯಾದರೂ ಶಮನಗೊಳಿಸುವಲ್ಲಿ ತಮಿಳುನಾಡು ಸರ್ಕಾರದ ಪಾತ್ರ ಗೌಣ ಎಂಬುದೊಂದು ವಿಶೇಷ—ಗಲಭೆಯ ನಂತರ ಕಮ್ಯುನಿಸ್ಟ್ ಪಕ್ಷಗಳ ಹೊರತಾಗಿ ಇತರ ಎಲ್ಲಾ ರಾಜಕೀಯ ಪಕ್ಷಗಳ ನಿಲುವು ಆಶ್ಚರ್ಯ ಉಂಟುಮಾಡುವಂತಿದೆ.

—ಶ್ರೀಧರ ಆಚಾರ್ ಮತ್ತು ಎಂ. ಕೆ. ಶಂಕರ್ ಪ್ರಜಾವಾಣಿಯಲ್ಲಿ

● ಶಿಶು ಆರೋಗ್ಯಕ್ಕೆ ತೊಂದರೆ ಉಂಟುಮಾಡುವ ಆಹಾರವನ್ನು ಮಾರುವುದರಲ್ಲಿ, ಯೋಗ್ಯವಲ್ಲದ ಪದ್ಧತಿಗಳನ್ನು ಬಳಸಿಕೊಳ್ಳುತ್ತಿರುವುದನ್ನು ಏಷ್ಯಾದಲ್ಲಿರುವ ಅಂತರ್ರಾಷ್ಟ್ರೀಯ ಗ್ರಾಹಕರ ಸಂಘಟನಾ ಸಂಸ್ಥೆಯು ಇತ್ತೀಚಿನ ತನ್ನ ಅಧ್ಯಯನದಲ್ಲಿ ಪತ್ತೆ ಹಚ್ಚಿದೆ.

—ಪ್ರಜಾವಾಣಿ ಮಾ. 29

● ಮಾರ್ಚ್ 2 ರಂದು ಪಾಟ್ನಾದ ಬಳಿ ಶ್ರೀಮತಿ ಗಾಂಧಿಯವರು "ಮಾನವ ಕಟ್ಟಿದ ಅತ್ಯಂತ ಉದ್ದವಾದ ಸೇತುವೆ" ಯನ್ನು ಅಧಿಕೃತವಾಗಿ ತೆರೆದರು. "ಈ ಬಿಹಾರದ ಚರಿತ್ರೆಯ ಸುವರ್ಣ ದಿನ" ದಂದು ಸಂಪೂರ್ಣ ಪುಟ ಅಗಲದ ಜಾಹಿರಾತು ನೀಡಲಾಯಿತು. ಆದರೆ ಸತ್ಯ ಸಂಗತಿಯೆಂದರೆ ಈ ಸೇತುವೆ ತೆರೆದದ್ದು ಒಂದು ಢೋಂಗಿತನ. ಸೇತುವೆ ಇನ್ನೂ ಸಿದ್ಧವಾಗಿಲ್ಲ. ಮತ್ತು ಎಂದು ಇದು ನಿಜವಾಗಿ ಸಾಗಾಣಿಕೆಗೆ ತೆರೆಯುವುದು ಎಂದು ಯಾರಿಗೂ ಗೊತ್ತಿಲ್ಲ–

—ಸಂಡೇ ಪತ್ರಿಕೆಯಲ್ಲಿ

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.